ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ನವೆಂಬರ್ 08, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 177 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



## 2ಎ ಮೀಸಲಾತಿಗಾಗಿ ನಾಡಿದ್ದು ಹೆದ್ದಾರಿಯಲ್ಲಿ ಇಷ್ಟಲಿಂಗ ಪೂಜೆ

**ಪೂಜೆ ನಂತರ ಹೆದ್ದಾರಿ ತಡೆದು ಹೋರಾಟ: ಜಯ ಮೃತ್ಯುಂಜಯ ಶ್ರೀ**

ದಾವಣಗೆರೆ, ನ.7- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲು ಆಗ್ರಹಿಸಿ ಇದೇ ನ. 10ರಂದು ಬೆಳಿಗ್ಗೆ 10 ಗಂಟೆಗೆ ನಗರದ ಹೊರವಲಯದ ಚಿಂದೋಡಿ ಲೀಲಾ ಸಮುದಾಯ ಭವನದ ಬಳಿ ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡಿ ಹೆದ್ದಾರಿ ತಡೆ ನಡೆಸಲಾಗುವುದು ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ನಿವಾಸದಲ್ಲಿ ಮಂಗಳವಾರ ಬೆಳಿಗ್ಗೆ ಪತ್ರಿಕಾಗೋಷ್ಠಿ ನಡೆಸಿ ಈ ವಿಷಯ ತಿಳಿಸಿದ ಅವರು, ಅಂದಿನ ಹೋರಾಟದಲ್ಲಿ ಬಸನಗೌಡ ಪಾಟೀಲ ಯತ್ನಾಳ್, ಅರವಿಂದ ಬೆಲ್ಲದ್, ವಿನಯ್ ಕುಲಕರ್ಣಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಅನುಷ್ಠಾನ ಹಾಗೂ ಲಿಂಗಾಯತ ಉಪಸಮಾಜಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲು ಕೇಂದ್ರಕ್ಕೆ ಶಿಫಾರಸ್ಸು ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರ ನ. 10ರೊಳಗೆ ತೀರ್ಮಾನ ಪ್ರಕಟಿಸಿ ಸಮಾಜದ ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ಹಾಲುಮತ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಹಾಗೂ ಒಕ್ಕಲಿಗರ ಮೀಸಲಾತಿ ನೀಡುವ ವಿಚಾರವಾಗಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ. ಆದರೆ, ಲಿಂಗಾಯತ ಉಪ ಸಮಾಜಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡದೇ ಸರ್ಕಾರ ತಾರತಮ್ಯ ಮಾಡಿದೆ. ನ. 10ರ ಹೋರಾಟದ ಪೂರ್ವ ರಾಜ್ಯ ಸರ್ಕಾರ ಕನಿಷ್ಟ ಪಕ್ಷ ಕೇಂದ್ರಕ್ಕೆ ಲಿಂಗಾಯತ ಓಬಿಸಿ ಮೀಸಲಾತಿಗೆ ಶಿಫಾರಸ್ಸು ಮಾಡಲು ಕ್ರಮ ವಹಿಸಬೇಕು ಎಂದರು.

ನ. 10ರ ಹೋರಾಟದ ಸ್ಥಳದಲ್ಲಿಯೇ ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ, ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಯಾವ ರೀತಿ ಹೋರಾಟ ಮಾಡಬಹುದು ಎಂಬ ಬಗ್ಗೆಯೂ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಪ ೦ ಚ ಮ (3ನೇ ಪುಟಕ್ಕೆ)

# ಭತ್ತ ಬೆಂಬಲ ಬೆಲೆ ಜಾಗೃತಿಗೆ ಸೂಚನೆ

### ಸಾಮಾನ್ಯ ಭತ್ತಕ್ಕೆ 2183 ರೂ., ಎ ಗ್ರೇಡ್‌ಗೆ 2203 ರೂ., ರಾಗಿಗೆ 3846 ರೂ. ಬೆಂಬಲ ಬೆಲೆ ನಿಗದಿ

**ಭತ್ತದ ಬೆಂಬಲ ಬೆಲೆ ಖಾತ್ರಿ ಕುರಿತ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟೇಶ್ ಸೂಚನೆ**



ದಾವಣಗೆರೆ, ನ.7- ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆ ಕುರಿತು ರೈತರಿಗೆ ಜಾಗೃತಿ ಮೂಡಿಸಿ ಹೆಚ್ಚು ಪ್ರಚಾರ ಪಡಿಸಬೇಕು ಹಾಗೂ ಭತ್ತ ಖರೀದಿ ಕೇಂದ್ರಗಳಲ್ಲಿ ಮೂಲಸೌಕರ್ಯಗಳನ್ನು ಒದಗಿಸಲು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಭತ್ತದ ಬೆಂಬಲ ಬೆಲೆ ಖಾತ್ರಿ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ ಸಾಲಿನಲ್ಲಿ ಮುಂಗಾರು ಹಂಗಾಮಿನ ಜಿಲ್ಲೆಯ ಭತ್ತವನ್ನು ಖರೀದಿ ಮಾಡಲಾಗುತ್ತಿದ್ದು, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸಾಮಾನ್ಯ ಭತ್ತಕ್ಕೆ ರೂ.2183, ಎ ಗ್ರೇಡ್ ಭತ್ತಕ್ಕೆ ರೂ.2203, ರಾಗಿಗೆ ರೂ.3846ನ್ನು ಬೆಂಬಲ ಬೆಲೆಯಾಗಿ ನಿಗದಿಪಡಿಸಲಾಗಿದೆ. ಭದ್ರಾ ಅಚ್ಚುಕಟ್ಟು ಪ್ರದೇಶಗಳಿಗೆ ಆನ್ ಅಂಡ್ ಆಫ್ ಪದ್ಧತಿಯಿಂದ ನಾಲೆಗಳಿಗೆ ನೀರನ್ನು ಹರಿಸುತ್ತಿರುವುದರಿಂದ ಉತ್ತಮ ಭತ್ತದ ಇಳುವರಿಯ ನಿರೀಕ್ಷೆ ಇದೆ ಎಂದರು.

ದಾವಣಗೆರೆ, ಹರಿಹರ, ಹೊನ್ನಾಳಿ ಮತ್ತು ಚನ್ನಗಿರಿಯಲ್ಲಿ ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ಜಿಲ್ಲೆಯಲ್ಲಿ 51,000 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬಿತ್ತನೆಯಾಗಿದೆ. 10 ರಿಂದ 15 ಸಾವಿರ ಕ್ವಿಂಟಾಲ್ ಭತ್ತದ ಖರೀದಿಗೆ ಜಿಲ್ಲೆಯಲ್ಲಿ ಅವಕಾಶವಿದೆ. ಖರೀದಿ ಕೇಂದ್ರಗಳಲ್ಲಿ ರೈತರು ತಮ್ಮ ಭತ್ತವನ್ನು ಮಾರಾಟ ಮಾಡಲು ನವೆಂಬರ್ 15 ರಿಂದ ಡಿಸೆಂಬರ್ 23ರವರೆಗೆ ನೋಂದಾಯಿಸಬಹುದು. ಒಬ್ಬ ರೈತರಿಂದ 25 ರಿಂದ 40 ಕ್ವಿಂಟಾಲ್‌ವರೆಗೆ ಭತ್ತವನ್ನು ಖರೀದಿ ಮಾಡಲು ಅವಕಾಶವಿದೆ ಎಂದರು.

ರೈತರು ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಸ್ಥಿರತೆ ಒದಗಿಸುವ ನಿಟ್ಟಿನಲ್ಲಿ ಹಾಗೂ ಮಾರುಕಟ್ಟೆ ಕುರಿತು (3ನೇ ಪುಟಕ್ಕೆ)

## 20ನೇ ತಾರೀಖಿನ ಒಳಗೆ ಗೃಹಲಕ್ಷ್ಮಿ ಜಮಾ




ಬೆಂಗಳೂರು, ನ. 7 - ರಾಜ್ಯದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯ ಹಣ ಫಲಾನುಭವಿಗಳ ಖಾತೆಗೆ ಪ್ರತಿ ತಿಂಗಳ 15ರಿಂದ 20ರೊಳಗೆ ಜಮೆ ಆಗಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ.

ಕೆವೈಸಿ, ತಾಂತ್ರಿಕ ತೊಂದರೆ ಕಾರಣದಿಂದ ಒಂದು ಕೋಟಿ 10 ಲಕ್ಷ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಗೆ ತೊಂದರೆ ಆಗಿದ್ದು, ಸರ್ಕಾರದಿಂದ ಹಣ ಬರುವುದು ಸಹಾ ನಿಧಾನವಾದ್ದರಿಂದ ಜಮೆ ಆಗಲು ತಡವಾಗುತ್ತಿತ್ತು.

ಆದರೆ, ಇದೀಗ ತಾಂತ್ರಿಕ ಸಮಸ್ಯೆ ಪರಿಹರಿಸುವ ಕೆಲಸ ಆಗುತ್ತಿದೆ, ಬ್ಯಾಂಕ್ ಖಾತೆಗೆ ಒಂದು ತಿಂಗಳು ಹಣ ಜಮೆ ಆಗುವುದು ತಡವಾದರೂ ಎರಡು ತಿಂಗಳ ಮೊತ್ತ ನಾಲ್ಕು ಸಾವಿರ ರೂ. ಒಮ್ಮೆಲೇ ಬರಲಿದೆ. ಆತಂಕ ಬೇಡ ಎಂದರು.

ಈ ತಿಂಗಳಿನ ಕಂತು ಒಂದು ಕೋಟಿ 10 ಲಕ್ಷ ಫಲಾನುಭವಿಗಳಿಗೆ ನೀಡಲು ಸರ್ಕಾರದಿಂದ ಹಣ ಬಿಡುಗಡೆ ಆಗಿದೆ.

ಸರ್ಕಾರದಿಂದ ಖಾತೆಗೆ ಹಣ ಬರಲು 25 ದಿನ ಬೇಕಾಗುತ್ತಿತ್ತು, ಇದನ್ನು ಮತ್ತಷ್ಟು ಸರಳೀಕರಣಗೊಳಿಸಿದ್ದು, ಸರ್ಕಾರದಿಂದ ಖಜಾನೆಗೆ ಕಳುಹಿಸಿ ಅಲ್ಲಿಂದ ನಮ್ಮ ಇಲಾಖೆಯ ಪ್ರಧಾನ ಕಚೇರಿಯಿಂದ ಎಲ್ಲ ಫಲಾನುಭವಿಗಳ ಖಾತೆಗೆ ಹಣ ಹೋಗಲಿದೆ ಎಂದರು.

ಬಾಕಿ ಇದ್ದ 23 ಲಕ್ಷ ಜನರ ಕೆವೈಸಿ ಸರಿಪಡಿಸಲಾಗಿದೆ, ಇದೀಗ ಏಳು ಲಕ್ಷ ಮಂದಿ ಉಳಿದಿದ್ದಾರೆ, ಶೇ. 90ರಷ್ಟು ಸರಿಯಾಗಿದ್ದು, ಇನ್ನುಳಿದ ಶೇ. 10ರಷ್ಟು ಫಲಾನುಭವಿಗಳ ತೊಂದರೆಯನ್ನೂ ಸರಿ ಪಡಿಸಲಿದ್ದೇವೆ ಎಂದರು.

## ಪ್ರಳಯ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಳಸೋರ್, ನ. 7 – ನೆಲದಿಂದ ನೆಲಕ್ಕೆ ಸಿಡಿಯುವ ಅಲ್ಪ ದೂರದ ಬ್ಯಾಲಿಸ್ಟಿಕ್ ಕ್ಷಿಪಣಿ 'ಪ್ರಳಯ್' ಅನ್ನು ಒಡಿಶಾ ಕರಾವಳಿ ಅಬ್ದುಲ್ ಕಲಾಂ ದ್ವೀಪದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ.

ಡಿ.ಆರ್.ಡಿ.ಒ. ರೂಪಿಸಿರುವ ಕ್ಷಿಪಣಿಯನ್ನು ಬೆಳಿಗ್ಗೆ 9.50ರ ಸಮಯದಲ್ಲಿ ಪರೀಕ್ಷಿಸಲಾಗಿದೆ. ಪರೀಕ್ಷೆಯ ಎಲ್ಲಾ ಗುರಿಗಳನ್ನು ಕ್ಷಿಪಣಿ ತಲುಪಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಳಯ್ ಕ್ಷಿಪಣಿಯು 350-500 ಕಿ.ಮೀ. ದೂರ ವ್ಯಾಪ್ತಿ ಹೊಂದಿದೆ. 500ರಿಂದ 1,000 ಕೆ.ಜಿ. ಸಿಡಿತಲೆಯನ್ನು ಹೊರುವ ಸಾಮರ್ಥ್ಯವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕ್ರಿಪ್ಟೋ ವಂಚನೆಗೆ ಕಾರ್ಪೊರೇಟ್ ಶೈಲಿಯ ಬಹುಮಾನ : ಎಸ್ಐಟಿ

**2,500 ಕೋಟಿ ರೂ. ವಂಚನೆಯ ಜಾಲದ ತಂತ್ರಗಾರಿಕೆ**

ಶಿಮ್ಲಾ, ನ. 7 – ಹಿಮಾಚಲ ಪ್ರದೇಶದ 2,500 ಕೋಟಿ ರೂ.ಗಳ ಕ್ರಿಪ್ಟೋ ಕರೆನ್ಸಿ ವಂಚನೆ ನಡೆಸಿದವರು, ತಮ್ಮ ಏಜೆಂಟರಿಗೆ ಕಾರ್ಪೊರೇಟ್ ಶೈಲಿಯಲ್ಲಿ ಬಹುಮಾನ ನೀಡುತ್ತಿದ್ದರು. ಹೆಚ್ಚಿನ 'ಸಾಧನೆ' ಮಾಡಿದವರಿಗೆ ವಿದೇಶ ಪ್ರವಾಸಕ್ಕೆ ಕಳಿಸುತ್ತಿದ್ದರು ಎಂದು ಹಗರಣದ ತನಿಖೆ ನಡೆಸುತ್ತಿರುವ ಎಸ್.ಐ.ಟಿ. ತಿಳಿಸಿದೆ.

ಅತಿ ಹೆಚ್ಚು ಹಣ ತಂದವರಿಗೆ ಥೈಲ್ಯಾಂಡ್, ದುಬೈ ಮತ್ತಿತರೆ ಕಡೆ ಪ್ರವಾಸಕ್ಕೆ ಕಳಿಸಲಾಗುತ್ತಿತ್ತು. ಈ ರೀತಿಯ 2,000 ಪ್ರವಾಸ ಸೌಲಭ್ಯ ಕಲ್ಪಿಸಲಾಗಿತ್ತು. ವಿದೇಶ ಪ್ರವಾಸಕ್ಕಾಗಿ 3.5 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ವಿಶೇಷ ತನಿಖಾ ತಂಡದ ಮುಖ್ಯಸ್ಥರಾಗಿರುವ ಡಿ.ಐ.ಡಿ. ಅಭಿಷೇಕ್ ಧುಲ್ಲರ್ ಹೇಳಿದ್ದಾರೆ. ಸರ್ಕಾರ ರಾಜ್ಯದಲ್ಲಿ ನಾಲ್ಕು ಪಥಗಳ ಹೆದ್ದಾರಿ ರೂಪಿಸಿತ್ತು. ಈ ಹೆದ್ದಾರಿಗೆ ಜಮೀನು ನೀಡಿದವರಿಗೆ ಪರಿಹಾರ ನೀಡಲಾಗಿತ್ತು. ಈ ಪರಿಹಾರ ಪಡೆದ ಹಲವರಿಗೆ ವಂಚಕರ ತಂಡ ಮೋಸ ಮಾಡಿದೆ. ಮಂಡಿ, ಹಮೀರ್ಪುರ ಹಾಗೂ ಕಾಂಗ್ರಾಗಳಲ್ಲಿ ಜಮೀನು ಕಳೆದುಕೊಂಡವರನ್ನು ನಕಲಿ ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿಸುವ ಮೂಲಕ ವಂಚಿಸಲಾಗಿದೆ.

ನಕಲಿ ಕ್ರಿಪ್ಟೋ ಕರೆನ್ಸಿ ಹಗರಣದಲ್ಲಿ 4ರಿಂದ 5 ಸಾವಿರ ಸರ್ಕಾರಿ ನೌಕರರು ಒಂದು ಲಕ್ಷ ರೂ.ಗಳ ಹಣ ಕಳೆದುಕೊಂಡಿದ್ದಾರೆ.

ಕ್ರಿಪ್ಟೋ ಹಗರಣಕ್ಕೆ ಸಂಬಂಧಿಸಿದಂತೆ 18 ಜನರನ್ನು ಇದುವರೆಗೂ ಬಂಧಿಸಲಾಗಿದೆ. (3ನೇ ಪುಟಕ್ಕೆ)

## ಮಾರ್ಫ್, ಡೀಪ್ ಫೇಕ್ ವಿಡಿಯೋ ತೆಗೆದು ಹಾಕಿ

**ನಟಿ ರಶ್ಮಿಕಾ ಮಂದಣ್ಣ ಡೀಪ್ ಫೇಕ್ ವಿಡಿಯೋ ನಂತರ ಸಾಮಾಜಿಕ ಜಾಲ ತಾಣಗಳಿಗೆ ಕೇಂದ್ರ ಸೂಚನೆ**

ನವದೆಹಲಿ, ನ. 7 – ಮಾರ್ಫ್ ಮಾಡುವುದೂ ಸೇರಿದಂತೆ ಎಲೆಕ್ಟ್ರಾನಿಕ್ ಸ್ವರೂಪದಲ್ಲಿ ಬೇರೊಬ್ಬ ವ್ಯಕ್ತಿಯ ರೀತಿಯ ಸೋಗು ಹಾಕುವ ವಿಡಿಯೋ ಹಾಗೂ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳು ದೂರು ಬಂದ 36 ಗಂಟೆಗಳ ಒಳಗೆ ತೆಗೆದು ಹಾಕಬೇಕು ಎಂದು ಕೇಂದ್ರ ಸರ್ಕಾರ ಸಾಮಾಜಿಕ ಜಾಲತಾಣ ಕಂಪನಿಗಳಿಗೆ ತಿಳಿಸಿದೆ.

ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್ ಫೇಕ್ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು ತೀವ್ರ ಆಕ್ಷೇಪಕ್ಕೆ ಕಾರಣವಾಗಿತ್ತು. ಇದರ ಬೆನ್ನಲ್ಲೇ ಜಾಲತಾಣ ಕಂಪನಿಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ಸಾಮಾಜಿಕ ಜಾಲತಾಣ ಕಂಪನಿಗಳು ತಮ್ಮ ಬಳಕೆದಾರರಿಗೆ ನಿಯಮಗಳು, ನಿಯಂತ್ರಣ, ಖಾಸಗಿತನದ ನೀತಿ ಹಾಗೂ ಬಳಕೆದಾರರ ಒಪ್ಪಂದದ ಬಗ್ಗೆ ಸಂವೇದನೆ ಮೂಡಿಸಬೇಕು. ಬೇರೆ ವ್ಯಕ್ತಿಯ ಸೋಗುವ ಹಾಕುವ ವಿಡಿಯೋಗಳನ್ನು ಪ್ರಕಟಿಸದಂತೆ ತಿಳಿಸಬೇಕು ಎಂದೂ ಕೇಂದ್ರ ಸರ್ಕಾರ ಹೇಳಿದೆ. ಮಾಹಿತಿ ತಂತ್ರಜ್ಞಾನ ನಿಯಮಗಳ ಅನ್ವಯ (4ನೇ ಪುಟಕ್ಕೆ)

## ಕೆಇಎ ನೇಮಕಾತಿ ಪರೀಕ್ಷೆ ವಂಚಕ ಪಾಟೀಲ್ ಮಹಾರಾಷ್ಟ್ರಕ್ಕೆ ಪರಾರಿ

**ಶೀಘ್ರದಲ್ಲೇ ಬಂಧನ ಎಂದ ಗೃಹ ಸಚಿವ ಪರಮೇಶ್ವರ್**

ಬೆಂಗಳೂರು, ನ. 7 – ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ವಂಚಿಸಿದ ಪ್ರಕರಣದ ರೂವಾರಿ ಆರ್.ಡಿ. ಪಾಟೀಲ್ ಮಹಾರಾಷ್ಟ್ರಕ್ಕೆ ಪರಾರಿಯಾಗಿದ್ದಾನೆ. ಶೀಘ್ರದಲ್ಲೇ ಆತನನ್ನು ಬಂಧಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ.

ಅಕ್ಟೋಬರ್ 28ರಂದು ಎಫ್.ಡಿ.ಎ. ಹುದ್ದೆಗಳಿಗಾಗಿ ನಡೆದ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ವಂಚನೆ ಮಾಡಿದ್ದು ಕಂಡು ಬಂದಿತ್ತು. ನಂತರ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಿಂದ 20 ಜನರನ್ನು ಬಂಧಿಸಲಾಗಿದೆ. ಈ ಹಗರಣದಲ್ಲಿ ಪಾಟೀಲ್ ಪಾತ್ರವಿದೆ ಎಂದು ಶಂಕಿಸಲಾಗಿದೆ. ಕಲಬುರಗಿಯ ಮಹಾಲಕ್ಷ್ಮಿ ಅಪಾರ್ಟ್‌ಮೆಂಟ್ ನಿಂದ ಪಾಟೀಲ್ ಗೋಡೆ ಹತ್ತಿ ಪರಾರಿಯಾಗಿರುವ ದೃಶ್ಯ ಸಿ.ಸಿ.ಟಿ.ವಿ.ಯಲ್ಲಿ ಕಂಡು ಬಂದಿದೆ.

ಪಾಟೀಲ್ ಈ ಹಿಂದೆ ಪಿ.ಎಸ್.ಐ. ನೇಮಕಾತಿ ಹಗರಣದಲ್ಲಿ ಭಾಗಿಯಾದ ಆರೋಪವೂ ಇತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎ.ಡಿ.ಜಿ.ಪಿ. ಅಮೃತ್ ಪೌಲ್ ಬಂಧಿಸಲಾಗಿತ್ತು. ಆರೋಪಿ ಬಂಧಿಸಲು ನಾವು ಪೊಲೀಸರಿಗೆ ಸೂಚನೆ ನೀಡಿದ್ದೇವೆ. ಆತನನ್ನು ಬಂಧಿಸಲಾಗುವುದು, ಆತ ಒಂದು ದಿನಕ್ಕೆ ಮಾತ್ರವೇ ತಪ್ಪಿಸಿಕೊಂಡಿದ್ದಾನೆ ಎಂದು ಪರಮೇಶ್ವರ್ ಹೇಳಿದ್ದಾರೆ.

ಪಾಟೀಲ್ ಪರಾರಿಯಾಗಲು ಸಹಕರಿಸಿದವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು. ಆತನ ವಿರುದ್ಧ ಈಗಾಗಲೇ ಪಿ.ಎಸ್.ಐ. ನೇಮಕಾತಿ ಹಗರಣದ ಪ್ರಕರಣವೂ ದಾಖಲಾಗಿದೆ ಎಂದು ಪರಮೇಶ್ವರ್ ತಿಳಿಸಿದ್ದಾರೆ.

ಈ ಪ್ರಕರಣವನ್ನು ನಾವು ಪರಿಶೀಲಿಸುತ್ತೇವೆ. ಅಗತ್ಯವಾದಲ್ಲಿ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಲಾಗುವುದು. ತನಿಖೆ ನಂತರ ಸತ್ಯ ಹೊರಗೆ (3ನೇ ಪುಟಕ್ಕೆ)

## ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಅತ್ಯುನ್ನತ ಸಹಕಾರಿ ಬ್ಯಾಂಕ್ ಪ್ರಶಸ್ತಿ



ದಾವಣಗೆರೆ, ನ. 7- ಭಾರತದ ಸಹಕಾರ ಬ್ಯಾಂಕ್‌ಗಳಲ್ಲಿ ಅತ್ಯುನ್ನತ ಸಹಕಾರಿ ಬ್ಯಾಂಕ್ ಎಂಬ ಪ್ರಶಸ್ತಿಗೆ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಭಾಜನವಾಗಿದೆ.

ಅವೈಸ್ ಪಬ್ಲಿಕೇಷನ್ (ಕೊಲ್ಲಾಪುರ) ಸಂಸ್ಥೆಯು ಪ್ರತಿ ವರ್ಷ ಭಾರತ ದೇಶದಲ್ಲಿನ ಸಹಕಾರ ಬ್ಯಾಂಕುಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಿ, ಪ್ರತಿ ವರ್ಗದಲ್ಲಿ ಅತ್ಯುನ್ನತ ಸಹಕಾರಿ ಬ್ಯಾಂಕ್ ಎಂದು ಗುರುತಿಸಿ, ನೀಡುವ ಪ್ರಶಸ್ತಿಗೆ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಯ್ಕೆಯಾಗಿದೆ.

ಅವೈಸ್ ಪಬ್ಲಿಕೇಷನ್ ಸಂಸ್ಥೆಯು ವಿಂಗಡಿಸಿರುವ ಮೂರು ವರ್ಗಗಳ ಪೈಕಿ 400 ರಿಂದ 500 ಕೋಟಿ ರೂ. ಠೇವಣಿ ಹೊಂದಿರುವ ವಿಭಾಗಕ್ಕೆ ದಾವಣಗೆರೆ ಅರ್ಬನ್ ಬ್ಯಾಂಕ್‌ಗೆ ಪ್ರಶಸ್ತಿ ನೀಡಿದೆ. ಈ ಬ್ಯಾಂಕ್ 2022-23ನೇ ಸಾಲಿನಲ್ಲಿ 494 ಕೋಟಿ ರೂ. ಠೇವಣಿ ಹೊಂದಿತ್ತು. ಈ ಹಿನ್ನೆಲೆಯಲ್ಲಿ ದಮನ್‌ನಲ್ಲಿ ಈಚೆಗೆ ಏರ್ಪಾಡಾಗಿದ್ದ ರಾಷ್ಟ್ರೀಯ ಸಹಕಾರ ಸಮ್ಮೇಳನ - 2023 ರಲ್ಲಿ ಅತ್ಯುನ್ನತ ಸಾಧನೆಗೈದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಬ್ಯಾಂಕೋ ಬ್ಲೂ ರಿಬ್ಬನ್ 2023 ಪ್ರಶಸ್ತಿ ನೀಡಿ ಗೌರವಿಸಿದೆ.

ಬ್ಯಾಂಕಿನ ಅತ್ಯುನ್ನತ ಸಾಧನೆಗೆ ಸಹಕರಿಸುತ್ತಿರುವ ಬ್ಯಾಂಕಿನ ಸದಸ್ಯರಿಗೂ, ಗ್ರಾಹಕರಿಗೂ, ಠೇವಣಿದಾರರಿಗೂ, ಕಾರ್ಯನಿರ್ವಾಕ ಮಂಡಳಿ ಸದಸ್ಯರಿಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಕೃತಜ್ಞತೆ ಸಲ್ಲಿಸಿದ್ದಾರೆ.

## ಬಿಹಾರದಲ್ಲಿ 87% ಮೀಸಲಾತಿ

**ಮುಖ್ಯಮಂತ್ರಿ ನಿತೀಶ್ ಕುಮಾರ್ ನಿರ್ಧಾರ**

ಪಾಟ್ನಾ, ನ. 7- ಬಿಹಾರದಲ್ಲಿ ಮೀಸ ಲಾತಿಯ ಮಿತಿಯನ್ನು ಈಗಿರುವ ಶೇ.67ರಿಂದ ಶೇ.87ಕ್ಕೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ನಿತೀಶ್ ಕುಮಾರ್ ತಿಳಿಸಿದ್ದು, ಈ ಬಗ್ಗೆ ಪ್ರಸಕ್ತ ವಿಧಾನಸಭಾ ಅಧಿವೇಶನದಲ್ಲೇ ಶಾಸನ ಜಾರಿಗೆ ತರಲಾಗುವುದು ಎಂದಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ನೀಡಲಾಗುತ್ತಿರುವ ಮೀಸಲಾತಿಯನ್ನು ಶೇ.17ರಿಂದ ಶೇ.22ಕ್ಕೆ ಹೆಚ್ಚಿಸಲಾಗುವುದು. ಅದೇ ರೀತಿ ಇತರೆ ಹಿಂದುಳಿದ ವರ್ಗಗಳಿಗೆ ನೀಡಲಾಗುತ್ತಿರುವ ಶೇ.50ರ ಮೀಸಲಾತಿಯನ್ನು ಶೇ.65ಕ್ಕೆ ಹೆಚ್ಚಿಸಲಾಗುವುದು ಎಂದವರು ತಿಳಿಸಿದ್ದಾರೆ. ರಾಜ್ಯ ಸರ್ಕಾರ ಇತ್ತೀಚೆಗೆ ಜಾತಿ ಗಣತಿ ನಡೆಸಿತ್ತು. ಅದರ ಪ್ರಕಾರ, ರಾಜ್ಯದಲ್ಲಿ ಅತಿ ಹಿಂದುಳಿದ ವರ್ಗದವರ ಪ್ರಮಾಣ ಶೇ.63 ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಪ್ರಮಾಣ ಶೇ.21ರಷ್ಟಿದೆ. (2ನೇ ಪುಟಕ್ಕೆ)

## ಹಿರಿಯ ರಾಜಕಾರಣಿ ಚಂದ್ರೇಗೌಡ ನಿಧನ



ಬೆಂಗಳೂರು, ನ. 7 - ಹಿರಿಯ ರಾಜಕಾರಣಿ, ಮಾಜಿ ಸಚಿವ ಡಿ.ಬಿ. ಚಂದ್ರೇಗೌಡ ನಿಧನ ಹೊಂದಿದ್ದಾರೆ. ಅವರಿಗೆ 87 ವರ್ಷ ವಯಸ್ಸಾಗಿತ್ತು.

ಡಿ.ಬಿ. ಚಂದ್ರೇಗೌಡ ಅವರು ರಾಜ್ಯ ವಿಧಾನಸಭಾಧ್ಯಕ್ಷರಾಗಿ, ಕಾಂಗ್ರೆಸ್ ಆಡಳಿತದಲ್ಲಿ ಕಾನೂನು ಸಚಿವರಾಗಿ, ಬಿಜೆಪಿ ಸೇರಿ ಸಂಸದರಾಗಿ, ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಿದ್ದರು.

ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಅತ್ಯಂತ ಹಿರಿಯ ಹಾಗೂ ಬುದ್ಧಿವಂತ ರಾಜಕಾರಣಿಯಾಗಿದ್ದ (2ನೇ ಪುಟಕ್ಕೆ)




# ಹರಿಹರದಲ್ಲಿ ಶುದ್ಧ ನೀರಿನ ಘಟಕ ದುರಸ್ತಿಗೆ ಆಗ್ರಹ



ಹರಿಹರ, ನ. 7- ನಗರದ ಪ್ರಸಿದ್ಧ ಐತಿಹಾಸಿಕ ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹೊಸದಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಆದರೆ ಈ ಶುದ್ಧ ನೀರಿನ ಘಟಕ ಕೆಟ್ಟು ಹೋಗಿದ್ದು, ಸಾರ್ವಜನಿಕರು ಇದನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಗಮನಕ್ಕೆ ಹಲವಾರು ಬಾರಿ ತಂದರೂ ದುರಸ್ತಿ ಆಗಿರುವುದಿಲ್ಲ. ಇಲ್ಲಿಗೆ ಬರುವ ಭಕ್ತಾದಿಗಳಿಗೆ ನೀರಿನ ವ್ಯವಸ್ಥೆ ಇದ್ದೂ ಇಲ್ಲದಂತೆ ಆಗಿರುತ್ತದೆ. ಹಾಗಾಗಿ ಆದಷ್ಟು ಬೇಗ ಯಂತ್ರವನ್ನು ದುರಸ್ತಿ ಪಡಿಸಲು ಭಕ್ತಾದಿಗಳು ಆಗ್ರಹಿಸಿದ್ದಾರೆ.

## ರಾಜಕಾರಣಿ ಚಂದ್ರೇಗೌಡ ನಿಧನ

(1ನೇ ಪುಟದಿಂದ) ಚಂದ್ರೇಗೌಡ ಅವರು ಸಾಹಿತ್ಯದ ಬಗ್ಗೆಯೂ ಅಪಾರವಾಗಿ ತಿಳಿದುಕೊಂಡಿದ್ದರು ಎಂದಿದ್ದಾರೆ. ಅವರ ನಿಧನದಿಂದ ಕರ್ನಾಟಕದ ರಾಜಕಾರಣಕ್ಕೆ ನಷ್ಟ ಉಂಟಾಗಿದೆ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ತಿಳಿಸಿದರು.

## ಬಿಹಾರದಲ್ಲಿ 87% ಮೀಸಲಾತಿ

(1ನೇ ಪುಟದಿಂದ) ಬಿಹಾರ ಸರ್ಕಾರದ ಈ ಕ್ರಮ ರಾಜ್ಯದ ರಾಜಕೀಯದ ಮೇಲೆ ಮಹತ್ವದ ಪರಿಣಾಮ ಬೀರಲಿದೆ. ದೇಶದ ಇತರೆ ಭಾಗಗಳಲ್ಲೂ ಜಾತಿ ಗಣತಿ ಹಾಗೂ ಮೀಸಲಾತಿ ಹೆಚ್ಚಳದ ಒತ್ತಾಯ ತೀವ್ರವಾಗುವ ನಿರೀಕ್ಷೆ ಇದೆ.

# ವಾಲ್ಮೀಕಿ ಜಾತ್ರೆ : ಸಮುದಾಯವನ್ನು ಜಾಗೃತಗೊಳಿಸಿ ಸಂಘಟಿಸುವುದು ಜಾತ್ರೆಯ ಉದ್ದೇಶ



### ಪೂರ್ವಭಾವಿ ಸಭೆಯಲ್ಲಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ

ಮಲೇಬೆನ್ನೂರು, ನ. 7 - ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಿ, ಸಂಘಟಿಸುವುದು ವಾಲ್ಮೀಕಿ ಜಾತ್ರೆಯ ಉದ್ದೇಶವಾಗಿದೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಅವರು ಸೋಮವಾರ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಹಮ್ಮಿಕೊಂಡಿದ್ದ 'ವಾಲ್ಮೀಕಿ ಜಾತ್ರಾ ಮಹೋತ್ಸವ - 2024' ರ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಜಾತ್ರೆ ಒಂದು ಧಾರ್ಮಿಕ ಪರಂಪರೆಯಾಗಿದ್ದರೂ, ಸಮುದಾಯದ ಜನರನ್ನು ಒಂದೆಡೆ ಸೇರಿಸಿ ಜಾಗೃತಿ ಮೂಡಿಸುವ ಮತ್ತು ಸಂಘಟನೆ ಮಾಡುವ ಉದ್ದೇಶ ಹೊಂದಿದೆ. 2024 ರ ಫೆ. 8 ಮತ್ತು 9 ರಂದು ರಾಜನಹಳ್ಳಿ ಮಠದ ಆವರಣದಲ್ಲಿ 6 ನೇ ವರ್ಷದ ವಾಲ್ಮೀಕಿ ಜಾತ್ರೆ ನಡೆಯಲಿದೆ ಎಂದರು.

ಈ ಹಿಂದಿನ ಜಾತ್ರಾ ಮಹೋತ್ಸವ ಸಮಿತಿಗೆ ಸಚಿವ ಸತೀಶ್ ಜಾರಕಿಹೊಳಿ, ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಮಾಜಿ ಶಾಸಕ ಎಸ್.ವಿ. ರಾಮಚಂದ್ರಪ್ಪ. ಶಾಸಕ ಟಿ. ರಘುಮೂರ್ತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮುಂಬರುವ ಜಾತ್ರೆಗೆ ಸಚಿವ ಕೆ.ಎನ್. ರಾಜಣ್ಣ ಅಥವಾ ನಾಗೇಂದ್ರ ಅವರನ್ನು ನೇಮಿಸಬಹುದಾಗಿದೆ ಎಂದರು.

ರಾಜ್ಯದಲ್ಲಿ ಸಮುದಾಯದ 18 ಶಾಸಕರು, ಇಬ್ಬರು ಸಂಸದರು, ವಿಧಾನ ಪರಿಷತ್ ಸದಸ್ಯರು ಸೇರಿ ಅನೇಕ ಮುಖಂಡರು ಇದ್ದಾರೆ. ಅವರೆಲ್ಲರ ಸಲಹೆ, ಸಹಕಾರ ಪಡೆಯಲಾಗುವುದು. ಜಾತ್ರೆ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಬೇಕಿದೆ. ಎಲ್ಲರೂ ಸಹಕಾರ ನೀಡಿದಲ್ಲಿ ಈ ಬಾರಿಯ ಜಾತ್ರೆಯನ್ನು ಐತಿಹಾಸಿಕ ಕ್ಷಣವಾಗಿಸಬಹುದು ಎಂದು ಸ್ವಾಮೀಜಿ ತಿಳಿಸಿದರು. ಈ ವೇಳೆ ಅನೇಕರು ಜಾತ್ರೆಗೆ ಚಲನಚಿತ್ರ ನಟರನ್ನು ಕರೆಸಬಾರದು, ಅವರನ್ನು ಕರೆಸಿದರೆ ಜಾತ್ರೆಯ ಉದ್ದೇಶಕ್ಕೆ ದಕ್ಕೆ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಮಠದ ಟ್ರಸ್ಟಿಗಳಾದ ಡಾ. ಜಿ. ರಂಗಯ್ಯ, ಬಿ. ವೀರಣ್ಣ, ನಲವಾಗಲು ನಾಗರಾಜಪ್ಪ, ಮಲ್ಲಪ್ಪ ಕೌಜಗೇರಿ, ಮಹೇಶ್, ಹರ್ತಿಕೋಟೆ ವೀರೇಂದ್ರ ಸಿಂಹ, ಜಂಬಯ್ಯ ನಾಯಕ, ಶಾಂತಾ ಸುರಪುರ, ಶಿವಮೊಗ್ಗ ಬಸವರಾಜ್, ಕೆ.ಬಿ. ಮಂಜಣ್ಣ, ಮುಖಂಡರಾದ ದಿನೇಶ್ ಬಾಬು, ಜಿಗಳಿ ರಂಗಪ್ಪ, ಮೆಣಸಿನಹಾಳ್ ಬಸವರಾಜ್, ಪಾರ್ವತಿ, ವಿಜಯಶ್ರೀ, ಗೌರಮ್ಮ, ರಾಜನಹಳ್ಳಿ ಭೀಮಣ್ಣ, ಹರಪನಹಳ್ಳಿ ಹುಚ್ಚಂಗೆಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸದಾಶಿವ ಆಯೋಗದ ವರದಿ ಮಂಡನೆಗೆ ಸಿಎಂ ಚರ್ಚೆ



ಬೆಂಗಳೂರು, ನ. 7 – ಎ.ಜೆ. ಸದಾಶಿವ ಆಯೋಗ ಒಳಮೀಸಲಾತಿಯ ಕುರಿತು ನೀಡಿರುವ ವರದಿಯನ್ನು ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಸಮುದಾಯಗಳ ಮುಖಂಡರು ಹಾಗೂ ಶಾಸಕರ ಜೊತೆ ಚರ್ಚೆ ನಡೆಸಲಿದ್ದಾರೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸದಾಶಿವ ಆಯೋಗದ ವರದಿಯನ್ನು ಮೊದಲ ಅಧಿವೇಶನದಲ್ಲೇ ಮಂಡಿಸಬೇಕಿತ್ತು. ಕಾರಣಾಂತರದಿಂದ ಅದು ಸಾಧ್ಯವಾಗಲಿಲ್ಲ ಎಂದರು.

ಬೆಳಗಾವಿಯಲ್ಲಿ ನಡೆಯಲಿರುವ ಎರಡನೇ ಅಧಿವೇಶನದಲ್ಲಿ ವರದಿ ಮಂಡಿಸಬೇಕು ಎಂದು ನಾನು, ಸಚಿವರಾದ ಹೆಚ್.ಸಿ. ಮಹದೇವಪ್ಪ, ಕೆ.ಹೆಚ್. ಮುನಿಯಪ್ಪ ಹಾಗೂ ಪ್ರಿಯಾಂಕ ಖರ್ಗೆ ಮುಖ್ಯಮಂತ್ರಿ ಜೊತೆ ಮಾತನಾಡಿದ್ದೇವೆ ಎಂದರು.

ಈ ಬಗ್ಗೆ ಸಮುದಾಯದ ಮುಖಂಡರ ಜೊತೆ ಚರ್ಚಿಸಿ ತೀರ್ಮಾನಿಸುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಎಲ್ಲರ ಅಭಿಪ್ರಾಯ, ಮನಸ್ಸುಗಳು ಒಂದಾಗಬೇಕು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ ಎಂದು ಪರಮೇಶ್ವರ್ ಹೇಳಿದರು.

ವರದಿ ಮಂಡನೆಯ ಕುರಿತು ಸರ್ಕಾರದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಎಲ್ಲ ಸಮುದಾಯದ ಮುಖಂಡರು ಹಾಗೂ ಶಾಸಕರ ಜೊತೆ ಚರ್ಚೆ ನಡೆಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ ಎಂದವರು ಸ್ಪಷ್ಟಪಡಿಸಿದರು.

ಸದಾಶಿವ ಆಯೋಗದ ವರದಿ ಜಾರಿಗಾಗಿ ಮಾದಿಗ ಸಮುದಾಯದರು ತೀವ್ರ ಹೋರಾಟ ನಡೆಸಬೇಕು ಎಂದು ನಿನ್ನೆಯಷ್ಟೇ ಸಚಿವ ಮುನಿಯಪ್ಪ ಅವರು ಕರೆ ನೀಡಿದ್ದರು.

ಆದಿ ಜಾಂಬವ ಸಾಂಸ್ಕೃತಿಕ ಸಮಿತಿ ಸಭೆಯಲ್ಲಿ ಮಾತನಾಡಿದ ಸಚಿವರು, ಸಮುದಾಯದವರು ಪ್ರತಿ ಶಾಸಕ ಹಾಗೂ ಸಚಿವರ ಮನೆಗಳಿಗೆ ತೆರಳಿ ವರದಿ ಜಾರಿಗೆ ಆಗ್ರಹಿಸಬೇಕು ಎಂದು ಕರೆ ನೀಡಿದ್ದರು.

# ರೈತರ ಹಿತ ಕಾಪಾಡಲು ಕಾಂಗ್ರೆಸ್ ವಿಫಲ: ಕಾಗೇರಿ ಆರೋಪ



### ಬೆಳ್ಳೂಡಿಯಲ್ಲಿ ಬರ ಅವಲೋಕಿಸಿದ ಬಿಜೆಪಿ ತಂಡ

ಮಲೇಬೆನ್ನೂರು ನ. 7 - ಗ್ಯಾರಂಟಿಗಳಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ರಾಜ್ಯದ ರೈತರ ಹಿತವನ್ನು ಕಾಪಾಡುವಲ್ಲಿ ವಿಫಲವಾಗಿದೆ ಎಂದು ವಿಧಾನಸಭೆಯ ಮಾಜಿ ಸಭಾಪತಿ ವಿಶ್ವೇಶ್ವರ ಹೆಗಡೆ ಕಾಗೇರಿ ಆರೋಪಿಸಿದರು.

ಅವರು ಸೋಮವಾರ ಬೆಳ್ಳೂಡಿ ಗ್ರಾಮಕ್ಕೆ ಭೇಟಿ ನೀಡಿ, ಬರ ವೀಕ್ಷಣೆ ಅವಲೋಕಿಸಿದ ನಂತರ ರೈತರೊಂದಿಗೆ ಮಾತನಾಡಿದರು.

ಬೆಳೆ ಹಾನಿಗೊಳಗಾದ ರೈತರು ಚಿಂತಿಸದಿರಿ, ನಿಮ್ಮ ಜೊತೆಯಲ್ಲಿ ಬಿಜೆಪಿ ಪಕ್ಷ ಸದಾ ಇರುತ್ತದೆ ಎಂದು ಆತ್ಮಸ್ಥೈರ್ಯ ತುಂಬಿದರು.

ಬೆಳೆ ಹಾನಿಗೊಳಗಾದ ರೈತರಿಗೆ ಪ್ರತಿ ಎಕರೆಗೆ ಕನಿಷ್ಠ 40 ಸಾವಿರ ಬರ ಪರಿಹಾರ ನೀಡಬೇಕು.

ಗ್ಯಾರಂಟಿ ನೀಡುವುದರಲ್ಲಿಯೇ ತಲ್ಲೀನರಾಗಿರುವ ಕಾಂಗ್ರೆಸ್ ಸರ್ಕಾರ ರೈತರನ್ನು ನಿರ್ಲಕ್ಷ್ಯ ಮಾಡುತ್ತಿದೆ. ರೈತರಿಗೆ ಕನಿಷ್ಠ ಏಳು ತಾಸು (ಗಂಟೆ) ನಿರಂತರ ವಿದ್ಯುತ್ ನೀಡುವ ಮೂಲಕ ರಾಜ್ಯ ಸರ್ಕಾರ ಕೂಡಲೇ ರೈತರ ನೆರವಿಗೆ ಬರಬೇಕು ಎಂದು ಕಾಗೇರಿ ಒತ್ತಾಯಿಸಿದರು.

ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಬಿ.ಪಿ.ಹರೀಶ್, ಎಂಎಲ್‌ಸಿ ಕೆ.ಎಸ್ ನವೀನ್, ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ಮಾಜಿ ಶಾಸಕರಾದ ಪ್ರೊ.ಲಿಂಗಣ್ಣ, ಎಸ್.ವಿ ರಾಮಚಂದ್ರಪ್ಪ, ಡಾ.ಎ.ಹೆಚ್.ಶಿವಯೋಗಿಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಮುಖಂಡರಾದ ಎಲ್.ಎನ್ ಕಲ್ಲೇಶ್, ಲೋಕಿಕೆರೆ ನಾಗರಾಜ್, ಜಗದೀಶ್, ಕೋಳೇನಹಳ್ಳಿ ಸತೀಶ್, ಧನಂಜಯ ಕಡ್ಲೆಬಾಳು, ಹರಿಹರ ತಾ. ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪ್ರಧಾನ ಕಾರ್ಯದರ್ಶಿಗಳಾದ ಆದಾಪುರ ವೀರೇಶ್, ಕೆ.ಎನ್.ಹಳ್ಳಿ ಮಹಾಂತೇಶ್, ಗ್ರಾಮದ ಗೀತಾ ಬಸವರಾಜ್, ದಾಲ್ ಬಸವರಾಜ್, ಕೆ.ಎನ್. ಪ್ರವೀಣ್ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

# ರೈತರ ಮೇಲೆ ಸರ್ಕಾರದ ಗದಾ ಪ್ರಹಾರ

### ಕಿಡಿಕಾರಿದ ಲೋಕಿಕೆರೆ ನಾಗರಾಜ್

ದಾವಣಗೆರೆ, ನ.7- ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವ ಉದ್ದೇಶದಿಂದ ರೈತರಿಗೆ ವಿದ್ಯುತ್ ಶಾಕ್ ನೀಡುತ್ತಿದೆ ಎಂದು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ನಾಗರಾಜ್ ಲೋಕಿಕೆರೆ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ರೈತರು ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಅಗತ್ಯವಿರುವ ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್ ಸೇರಿ ಎಲ್ಲ ಪರಿಕರಗಳಿಗೆ ತಗಲುವ ವೆಚ್ಚವನ್ನು ರೈತರೇ ಭರಿಸಬೇಕು ಎಂಬ ರಾಜ್ಯ ಸರ್ಕಾರದ ನಿರ್ಧಾರದಿಂದ ರೈತರು ಆತಂಕಕ್ಕೀಡಾಗಿದ್ದಾರೆ ಎಂದರು.

ಅಕ್ರಮ-ಸಕ್ರಮ ಯೋಜನೆ ಅಡಿ ಕೇವಲ 20,000 ರೂ. ಪಾವತಿಸಿ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯುತ್ತಿದ್ದ ರೈತರ ಮೇಲೆ ಸರ್ಕಾರ ಗಧಾ ಪ್ರಹಾರ ಮಾಡಿದೆ. ಪ್ರಸ್ತುತ ರಾಜ್ಯ ಸರಕಾರದ ಆದೇಶದಂತೆ ವಿದ್ಯುತ್ ಸಂಪರ್ಕಕ್ಕೆ ಆಗುವ ಎಲ್ಲ ವೆಚ್ಚವನ್ನು ರೈತರೇ ಭರಿಸಬೇಕಿದ್ದು, ಇದರಿಂದ ಒಂದು ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಕನಿಷ್ಠ 3-4 ಲಕ್ಷ ರೂ. ವೆಚ್ಚವಾಗಲಿದೆ. ಸರ್ಕಾರ ನೀಡಿದ ಆದೇಶವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದಲ್ಲಿ ರಾಜ್ಯದ 35 ಲಕ್ಷ ಪಂಪ್‌ಸೆಟ್ ರೈತ ಬಳಕೆದಾರರೊಂದಿಗೆ ಬಿಜೆಪಿ ರೈತ ಮೋರ್ಚಾ ಬೀದಿಗಿಳಿದು ಹೋರಾಟ ಮಾಡುತ್ತದೆ ಎಂದು ಎಚ್ಚರಿಸಿದರು.

ಬಿಜೆಪಿ ರಾಜ್ಯ ರೈತ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಕೋಳೇನಳ್ಳಿ ಸತೀಶ್ ಮಾತನಾಡಿ, ರಾಜ್ಯದ 223 ತಾಲ್ಲೂಕುಗಳನ್ನು 'ಬರ ಪೀಡಿತ' ಎಂದು ರಾಜ್ಯ ಸರ್ಕಾರ ಈಗಾಗಲೇ ಘೋಷಿಸಿದೆ. ಈ ಪೈಕಿ ತೀವ್ರ ಬರ ಎದುರಿಸುತ್ತಿರುವ ತಾಲ್ಲೂಕುಗಳ ಸಂಖ್ಯೆ ಹೆಚ್ಚಾಗಿದೆ ಎಂದು ಸ್ವತಃ ಸರ್ಕಾರವೇ ತಿಳಿಸಿದೆ. ಆದರೆ ಇದುವರೆಗೂ ಬರ ಪರಿಹಾರ ಕಾಮಗಾರಿ ಆರಂಭಿಸಿಲ್ಲ. ರೈತರಿಗೆ ಬರ ಪರಿಹಾರ ನೀಡಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ 200ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಬಾತಿ ಶಿವಕುಮಾರ್, ಅಣಜಿ ಗುಡ್ಡೇಶ್, ಕುಂದುವಾಡ ಗಣೇಶ್, ಬಾತಿ ರೇವಣಸಿದ್ದಪ್ಪ, ಗುರುನಾಥ್, ಕಡ್ಲೆಬಾಳು ಬಸವರಾಜ, ಧನಂಜಯ್ ಕಡ್ಲೆಬಾಳು ಇದ್ದರು.

# ಹರಪನಹಳ್ಳಿ ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಬಾಣದ ಅಂಜಿನಪ್ಪ



ಹರಪನಹಳ್ಳಿ, ನ.7- ತಾಲ್ಲೂಕಿನ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಬಾಣದ ಅಂಜಿನಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಉಸ್ಮಾನ್ ಸಾಬ್ ಹಾಗೂ ಎಂ.ಕರಿಬಸಪ್ಪ, ಕಾರ್ಯದರ್ಶಿಯಾಗಿ ಎ.ಕರಿಬಸವರಾಜ್, ಸಹ ಕಾರ್ಯದರ್ಶಿಯಾಗಿ ಯು.ಕೆಂಚಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಬಿ.ಗೋಣೆಪ್ಪ, ಖಜಾಂಚಿಯಾಗಿ ಯು.ದತ್ತಾತ್ರೇಯ ಭಟ್, ಕಚೇರಿ ಕಾರ್ಯನಿರ್ವಾಹಕರಾಗಿ ಸೈಯ್ಯದ್ ಬಷೀರ್ ಅವರುಗಳು ಆಯ್ಕೆಯಾಗಿದ್ದಾರೆ ಎಂದು ನಿರ್ಗಮಿತ ಅಧ್ಯಕ್ಷ ಟಿ.ರಾಮಪ್ಪ ತಿಳಿಸಿದ್ದಾರೆ.

# ಉದ್ಯಮಿ ಶ್ರೀನಿವಾಸ್ ಶಿವಗಂಗಾ ಅವರಿಗೆ ಮಹಾತ್ಮಾ ಗಾಂಧಿ ಸದ್ಭಾವನಾ ಪ್ರಶಸ್ತಿ



ದಾವಣಗೆರೆ, ನ. 7 - ಬೆಂಗಳೂರಿನ ಗಾಂಧಿ ಭವನದಲ್ಲಿ ಮೊನ್ನೆ ನಡೆದ ಸಮಾರಂಭದಲ್ಲಿ ಮಹಾತ್ಮಾ ಗಾಂಧಿ ಸದ್ಭಾವನಾ ಪ್ರಶಸ್ತಿಯನ್ನು ನಗರದ ಯುವ ಉದ್ಯಮಿ ಶ್ರೀನಿವಾಸ್ ಶಿವಗಂಗಾ ಅವರಿಗೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

# ಎಫ್.ಐ.ಡಿ. ಮಾಡಿಸಲು ರೈತರಿಗೆ ಸೂಚನೆ

ದಾವಣಗೆರೆ, ನ.7- ಸರ್ಕಾರದ ಯೋಜನೆಗಳ ಸೌಲಭ್ಯ ಪಡೆಯಲು ರೈತರು ಎಫ್.ಐ.ಡಿ ಮಾಡಿಸುವುದು ಕಡ್ಡಾಯವಾಗಿದೆ.

ಆದ್ದರಿಂದ ರೈತರು ತಮ್ಮ ಹೆಸರಲ್ಲಿರುವ ಎಲ್ಲಾ ಪಹಣಿಗಳನ್ನು ಆಧಾರ್, ಬ್ಯಾಂಕ್ ಖಾತೆ ಪುಸ್ತಕದ ಜೆರಾಕ್ಸ್ ಪ್ರತಿಗಳೊಂದಿಗೆ ಹರಿಹರ ಕೃಷಿ ಇಲಾಖೆಯಲ್ಲಿ ಎಫ್.ಐ.ಡಿ ನೋಂದಣಿ ಮಾಡಿಸುವಂತೆ ತಿಳಿಸಿರುವ ಕಂದಾಯ ಇಲಾಖೆ, ಇಲ್ಲವಾದರೆ ಸರ್ಕಾರದ ಎಲ್ಲಾ ಪರಿಹಾರದಿಂದ ವಂಚಿತರಾಗುತ್ತೀರಿ ಎಂದು ಎಚ್ಚರಿಸಿದೆ.

# ಸಾಧು ವೀರಶೈವ ಸಮಾಜದ ಸಭೆ ಶಾಸಕ ಹರೀಶ್ ಸೇರಿ ನಾಲ್ವರಿಗೆ ಸನ್ಮಾನ



### ಹರಿಹರ

ಹರಿಹರ, ನ.7- ಇಲ್ಲಿನ ತರಳಬಾಳು ಶಾಲೆಯಲ್ಲಿ ಮಂಗಳವಾರ ಕರೆದಿದ್ದ ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಸಭೆಯಲ್ಲಿ ಶಾಸಕ ಬಿ.ಪಿ.ಹರೀಶ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹೊಳೆಸಿರಿಗೆರೆ ಹಾಲೇಶಪ್ಪ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ ಮತ್ತು ನಿವೃತ್ತ ಯೋಧ ಯಲವಟ್ಟಿಯ ಹೆಚ್. ಶಿವಕುಮಾರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ನಂತರ ಬೆಳ್ಳೂಡಿಯಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಭಕ್ತಿ ಸಮರ್ಪಣಾ ಕಾರ್ಯಕ್ರಮದ ಲೆಕ್ಕ-ಪತ್ರಗಳನ್ನು ಸಭೆಯಲ್ಲಿ ಸಮಾಜದ ಕಾರ್ಯದರ್ಶಿ ನಿಟ್ಟೂರಿನ ಇಟಗಿ ಶಿವಣ್ಣ ಒಪ್ಪಿಸಿದರು.

ತಾ. ಸಾಧು ವೀರಶೈವ ಸಮಾಜದ ಅಧ್ಯಕ್ಷರಾದ ಅಮರಾವತಿ ಗೌಡ್ರ ಮಹಾದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಡಿ.ಹೇಮಂತರಾಜ್, ಹೆಚ್.ಎಂ.ಶಿವಾನಂದಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ, ಜಿ. ಮಂಜುನಾಥ್ ಪಟೇಲ್, ಕೆ.ಜಿ.ವೀರನಗೌಡ್ರು, ತಳಸದ ಬಸವರಾಜ್, ದಿಬ್ದಹಳ್ಳಿ ಓಂಕಾರಪ್ಪ, ಹರಳಹಳ್ಳಿ ರವಿ, ಬೆಳ್ಳೂಡಿ ರುದ್ರೇಶ್, ಯಲವಟ್ಟಿ ಚನ್ನಬಸಪ್ಪ, ಕುಂಬಳೂರು ತೀರ್ಥಪ್ಪ, ಅಮರಾವತಿ ಪಾಲಾಕ್ಷಪ್ಪ, ಬೆಳ್ಳೂಡಿ ಹನುಮಂತಗೌಡ, ಕೊಂಡಜ್ಜಿಯ ಪಟೇಲ್ ಸಂಗಪ್ಪ, ಕೆ.ಎನ್.ಹಳ್ಳಿಯ ಹುಗ್ಗಿ ರೇವಣಪ್ಪ, ಕುಣೆಬೆಳಕೆರೆ ಮರಳಪ್ಪ, ಮಲ್ಲನಾಯ್ಕನಹಳ್ಳಿ ಗೌಡ್ರ ಶೇಖರಪ್ಪ, ಚಿಟ್ಟಕ್ಕಿ ನಾಗರಾಜ್ ಮತ್ತಿತರರು ಭಾಗವಹಿಸಿದ್ದರು.

# ಹೆದ್ದಾರಿ ಸರ್ವಿಸ್ ರಸ್ತೆ ಬಳಿ ದರೋಡೆ : ಬಂಧನ

ದಾವಣಗೆರೆ, ನ.7- ಹೆದ್ದಾರಿ-48ರ ಬಳಿಯ ಸರ್ವಿಸ್ ರಸ್ತೆಯಲ್ಲಿ ನಡೆದ ದರೋಡೆ ಪ್ರಕರಣ ಬೇಧಿಸಿರುವ ಪೊಲೀಸರು ಐವರನ್ನು ಬಂಧಿಸಿದ್ದಾರೆ.

ಮೊಬೈಲ್ ಸರ್ವಿಸ್ ಕೆಲಸ ಮಾಡುತ್ತಿದ್ದ ದಾವಣಗೆರೆಯ ಕುಮಾರ್ ಬಿ (26), ಆಟೋ ಚಾಲಕ ಮಂಜುನಾಥ ಯು.ಎಸ್. (24), ಅಣಬೇರು ಗ್ರಾಮದ ಡ್ರೈವರ್ ಕೆಲಸ ಮಾಡುವ ಪ್ರವೀಣ್ ಕುಮಾರ್ ಎ.ಬಿ. (22), ಅದೇ ಗ್ರಾಮದ ಪರಶುರಾಮ (19) ಬಾಡಾ ಗ್ರಾಮದ ಶಿವಕುಮಾರ್ ಡಿ. (21) ಬಂಧಿತರು.

ಇವರಲ್ಲಿ ಕುಮಾರ, ಮಂಜುನಾಥ್, ಪ್ರವೀಣ್ ಕುಮಾರ್ ಈ ಹಿಂದೆ ಗ್ರಾಮಾಂತರ ಠಾಣೆಯ ಪ್ರಕರಣವೊಂದರಲ್ಲಿ ಆರೋಪಿತರಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಳಪಟ್ಟಿದ್ದರು. ಬಂಧಿತರಿಂದ 1 ಆಟೋ, 1 ಚಾಕು, 5100 ರೂ. ನಗದು, 20 ಸಾವಿರ ರೂ. ಮೌಲ್ಯದ ಮೊಬೈಲ್ ವಶಪಡಿಸಿಕೊಳ್ಳಲಾಗಿದೆ.

ಕಳೆದ ಅ.31ರಂದು ಮಧ್ಯಾಹ್ನ ಮಹೇಂದ್ರ ಜಿತೋ ಪ್ಲಸ್ ಗೂಡ್ಸ್ ವಾಹನಕ್ಕೆ ಬಾಡಿ ಕಟ್ಟಿಸಿಕೊಂಡು ಬರಲು ಚಿಕ್ಕನಾಯಕನಹಳ್ಳಿಯಿಂದ ರಾಣೇಬೆನ್ನೂರಿಗೆ ಹೋಗುತ್ತಿದ್ದಾಗ ಆನಗೋಡು ಬಳಿ ಹೈವೇ ಪಕ್ಕದ ಸರ್ವಿಸ್ ರಸ್ತೆಯಲ್ಲಿ ಮೂತ್ರ ವಿಸರ್ಜನೆಗೆ ವಾಹನ ನಿಲ್ಲಿಸಿದಾಗ ಅಪರಿಚಿತರ ಗುಂಪು ಆಟೋದಲ್ಲಿ ಬಂದು ಚಾಕು ತೋರಿಸಿ ದರೋಡೆ ನಡೆಸಿತ್ತು ಎಂದು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಮಾದಿಹಳ್ಳಿಯ ಸುರೇಶ್ ಎ.ಎಂ. ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಆರೋಪಿತರನ್ನು ಪತ್ತೆ ಮಾಡುವಲ್ಲಿ ಗ್ರಾಮಾಂತರ ಪೊಲೀಸ್ ಉಪಾಧೀಕ್ಷಕ ಬಸವರಾಜ ಬಿ.ಎಸ್., ಗ್ರಾಮಾಂತರ ಠಾಣೆ ಪೊಲೀಸ್ ನಿರೀಕ್ಷಕ ಕಿರಣ್ ಕುಮಾರ್, ಪಿಎಸ್ಐ ಜೋವಿತ್ ರಾಜ್ ಮತ್ತು ಸಿಬ್ಬಂದಿಗಳಾದ ಮಜೀದ್ ಕೆ, ಸಿ, ಆಂಜನೇಯ, ಸುರೇಶ್, ಮಾರುತಿ, ರಾಘವೇಂದ್ರ, ರಮೇಶ್ ನಾಯ್ಕ್, ಅಶೋಕ, ಬಾಲಾಜಿ, ನಟರಾಜ್, ಅಣ್ಣಯ್ಯ, ಮಹೇಶ, ವಿಶ್ವನಾಥ, ಶಾಂತರಾಜು ಯಶಸ್ವಿಯಾಗಿದ್ದಾರೆ.


## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಲಿಂ. ಕೋಟೆಹಾಳ್ ಶ್ರೀಮತಿ ಹಾಲಮ್ಮನವರು**

ನಿಧನ : 08-11-2021

ಲಿಂ. ಶ್ರೀ ಕೋಟೆಹಾಳ್ ಕೆ.ಎಂ. ನಾರಪ್ಪ, (ನಿವೃತ್ತ ಪಶು ವೈದ್ಯಕೀಯ ಸಹಾಯಕರು, ಅಣಬೇರು) ಇವರ ಧರ್ಮಪತ್ನಿ

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಶ್ರೀಮತಿ ಬಸಮ್ಮ ಮತ್ತು ಕೆ.ಎಂ. ಶೇಖರಪ್ಪ ಹಾಗೂ ಮಕ್ಕಳು ಅಣಬೇರು
ಶ್ರೀಮತಿ ಅನಸೂಯಮ್ಮ ಮತ್ತು ಕೆ.ಎಂ. ಪರಮೇಶ್ವರಪ್ಪ ಹಾಗೂ ಮಕ್ಕಳು ಅಣಬೇರು
ಶ್ರೀಮತಿ ವೀಣಾ ಎಸ್. ಮತ್ತು ಕೆ.ಎನ್ ಬಸವರಾಜು, ಮೊಮ್ಮಗ : ಕೆ.ಬಿ. ಚೇತನ್
ಶ್ರೀಮತಿ ಶಿವರುದ್ರಮ್ಮ ಮತ್ತು ಕೆ.ಎನ್ ಸಿದ್ದಪ್ಪ ಹಾಗೂ ಮಕ್ಕಳು ಕೋಗುಂಡಿ
ಕೋಟೆಹಾಳ್ ವಂಶಸ್ಥರು ಅಣಬೇರು, ಗೌಡ್ರ ವಂಶಸ್ಥರು ಕೋಗುಂಡಿ.



## ಬೇತೂರು ಶಕುಂತಲಮ್ಮ ನಿಧನ



ದಾವಣಗೆರೆ ಶ್ರೀನಿವಾಸ ನಗರ, 4ನೇ ಕ್ರಾಸ್, ಪ್ರಗತಿ ಕಾಂಕ್ರೀಟ್ ಪಕ್ಕ, ಹದಡಿ ರಸ್ತೆ ನಿವಾಸಿ ಬೇತೂರು ದಿ. ಶ್ರೀ ಮುರುಗೇಶಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಬೇತೂರು ಶಕುಂತಲಮ್ಮ**

ಇವರು, ದಿನಾಂಕ 07.11.2023ರ ಮಂಗಳವಾರ ಸಂಜೆ 4.50 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಮೂವರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.11.2023ರ ಬುಧವಾರ ಮಧ್ಯಾಹ್ನ 12.30ಕ್ಕೆ ನಗರದ ಗ್ಲಾಸ್ ಹೌಸ್ ಹತ್ತಿರವಿರುವ ಶ್ಯಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು :
ಬೇತೂರು ಸುರೇಶ್, ಬೇತೂರು ರಾಜೇಶ್,
ಬೇತೂರು ಪ್ರಕಾಶ್ ಹಾಗೂ ಬೇತೂರು ಕುಟುಂಬ ವರ್ಗ
ಮೊ : 95350 20635


## ಚಿತ್ರಕಲಾ ಸ್ಪರ್ಧೆ

ದಾವಣಗೆರೆ, ನ.7- ಇಂಪೀರಿಯಲ್ ಪಬ್ಲಿಕ್ ಶಾಲೆಯಲ್ಲಿ ನ.11ರಂದು ಬೆಳಿಗ್ಗೆ 10 ಗಂಟೆಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಎಲ್ಲಾ ಶಾಲೆಯ ಮಕ್ಕಳು ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಪರಿಸರದ ಬಗ್ಗೆ ಚಿತ್ರ ಬಿಡಿಸುವುದೇ ಚಿತ್ರಕಲೆಯ ವಿಷಯವಾಗಿದೆ. ವಿವರಕ್ಕೆ ಸಂಪರ್ಕಿಸಿ. ಮೊ: 7259292895, 7483103312.


## ಶಾಂತರಾಜು (ಬಾಬು) ನಿಧನ



ದಾವಣಗೆರೆ ಡಿ.ಸಿ.ಎಂ. ಟೌನ್‌ಶಿಪ್, 1ನೇ ಕ್ರಾಸ್, 4ನೇ ಮೇನ್ ವಾಸಿ ರಾಣೇಬೆನ್ನೂರಿನ ಸಿದ್ದಪ್ಪ ಹಂಸಾಗರ್ ಇವರ ಪುತ್ರ ಶಾಂತರಾಜ್ (ಬಾಬು) ಹಂಸಾಗರ (70) ಇವರು ದಿನಾಂಕ 07.11.2023ರ ಮಂಗಳವಾರ ಮಧಾಹ್ನ 12.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.11.2023ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ದುರ್ಜನರನ್ನೂ ಸಜ್ಜನರನ್ನಾಗಿ ಬದಲಾಯಿಸಬೇಕು



**ಸಾಣೇಹಳ್ಳಿಯಲ್ಲಿನ ರಾಷ್ಟ್ರೀಯ ನಾಟಕೋತ್ಸವದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ**

ಸಾಣೇಹಳ್ಳಿ, ನ. 7 ಶರಣರ ವಚನಗಳ ಸಂಗ ಮಾಡಿದರೂ ಸಾಕು ಸಜ್ಜನರಾಗಲು ಸಾಧ್ಯವಾಗುತ್ತದೆ. ಶರಣರ ವಚನಗಳು ನಿಜವಾಗಿಯೂ ಬೆಳಕಿನ ರೂಪಗಳು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ಚಿಂತನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಅವರು ಆಶೀರ್ವಚನ ನೀಡಿದರು.

ದುರ್ಜನರನ್ನು ದೂರ ಮಾಡುವುದಲ್ಲ, ಅವರನ್ನೂ ಸಜ್ಜನರಾಗಿ ಬದಲಾಯಿಸಬೇಕು. ನಾವು ಸಜ್ಜನರನ್ನಾಗುವುದಷ್ಟೇ ಮುಖ್ಯವಲ್ಲ, ಇನ್ನೊಬ್ಬರನ್ನೂ ಸಜ್ಜನರಾಗಿಸುವುದು ಬಹಳ ಮುಖ್ಯ. ಕಳ್ಳನನ್ನು, ವೇಶ್ಯೆಯನ್ನು ಶರಣರು ಬದಲಾಯಿಸಿದರು. ಸಜ್ಜನರ ಸಂಗ ಮಾಡುವುದಷ್ಟೇ ಅಲ್ಲ, ಅವರನ್ನು ಬದಲಾಯಿಸುವುದು ಮುಖ್ಯ. ಇಲ್ಲದಿದ್ದರೆ ದುರ್ಜನರೇ ಹೆಚ್ಚಾಗುತ್ತಾರೆ ಎಂದು ಎಚ್ಚರಿಸಿದರು.

ಬಸವಣ್ಣನವರು ಹೇಳಿದ ಹಾಗೆ ನುಡಿದರೆ ಮುತ್ತಿನ ಹಾರದಂತಿರಬೇಕು ಎನ್ನುವ ಹಾಗೆ ನಾವು ಆಡುವ ಮಾತುಗಳು ಇನ್ನೊಬ್ಬರ ಮನಸ್ಸಿನ ಸ್ವಚ್ಛತೆಗೆ ಕಾರಣ ವಾಗಬೇಕು. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಎಂದು ಬಸವಣ್ಣನವರು ಹೇಳಿದ ಹಾಗೆ ನಮ್ಮ ಅಂತರಂಗವನ್ನು ಶುಚಿ ಮಾಡಿಕೊಳ್ಳಬೇಕು. ಇದಕ್ಕಾಗಿ ಸೂಕ್ತ ವಾತಾವರಣವೂ ಬೇಕಾಗುತ್ತದೆ, ಎಚ್ಚರವೂ ಬೇಕಾಗುತ್ತದೆ.

ಬಹುರೂಪಿ ಚೌಡಯ್ಯ ಹೇಳಿದಂತೆ ಸದಾಚಾರಿಗಳು, ಸನ್ಮಾರ್ಗದಲ್ಲಿ ಸಾಗುವವರ ಜೊತೆಗೆ ಸಾಗಬೇಕು ಎಂದು. ಜಂಗಮ ಪ್ರೇಮಿ ಎಂದರೆ ಖಾವಿ ಹಾಕಿದವರಲ್ಲ. ಅರಿವು, ಆಚಾರ ಉಳ್ಳವರು ಜಂಗಮರು. ಹೆಣ್ಣು ಕೂಡ ಜಂಗಮ ಆಗಬಹುದು ಎಂದು ವಿವರಿಸಿದರು.

'ಸಜ್ಜನರ ಸಂಗ' ಕುರಿತು ಅಧ್ಯಾಪಕಿ ಪಿ.ಎಲ್.ಸಂಧ್ಯಾ ಮಾತನಾಡಿ, ಯಾರೇ ಕೆಟ್ಟರೂ ಸಹವಾಸ ದೋಷದಿಂದ ಎಂದು ಹೇಳುತ್ತೇವೆ. ಇದಕ್ಕಾಗಿ ಸ್ನೇಹ ಸಂಗ ಮುಖ್ಯವಾಗುತ್ತದೆ. ಬೆಣ್ಣೆ ಮುಟ್ಟಿದರೆ ಬೆಣ್ಣೆಯಂತೆ, ಸುಣ್ಣ ಮುಟ್ಟಿದರೆ ಸುಣ್ಣದಂತೆ. ಅಂತರಂಗ ಹಾಗೂ ಬಹಿರಂಗ ಶುದ್ಧವಿರು ವವರ ಸಂಗ ಒಳ್ಳೆಯದು ಎಂದರು.

ಶ್ರೀಮಂತನೊಬ್ಬ ತನ್ನ ಮಗನಿಗೆ ಸ್ವಲ್ಪ ಶ್ರೀಗಂಧ ಕೊಡುತ್ತಾನೆ. ಸ್ವಲ್ಪ ಸಮಯದ ನಂತರ ಕೈ ನೋಡು ಎನ್ನುತ್ತಾನೆ. ಆಗ ಸುಗಂಧದಿಂದ ಸುವಾಸನೆ ಬರುತ್ತದೆ. ಹಾಗೆಯೇ ಇದ್ದಿಲನ್ನು ಕೊಡುತ್ತಾನೆ. ಬಳಿಕ ಕೇಳಿದಾಗ ದುರ್ಗಂಧ ಹಾಗೂ ಕೈಗೆ ಮಸಿ ಅಂಟಿಕೊಳ್ಳುತ್ತದೆ. ಹೀಗೆಯೇ ನಮ್ಮ ಜೀವನ ಪಾವನ ಆಗಬೇಕಾದರೆ ಸಜ್ಜನರ ಸಂಗ ಮುಖ್ಯ ಎಂದು ಹೇಳಿದರು.

ಸಿದ್ಧರಾಮ ಕೇಸಾಪುರ, ಎಚ್.ಎಸ್. ನಾಗರಾಜ, ಕೆ.ಜ್ಯೋತಿ ವಚನಗಳನ್ನು ಹಾಡಿದರು. ಎನ್.ಸಿ.ದೀಪಾ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಜಿ.ಎಂ. ವಿವಿ ಉಪಕುಲಪತಿಯಾಗಿ ಡಾ. ಎಸ್.ಆರ್ ಶಂಕಪಾಲ್



ದಾವಣಗೆರೆ, ನ.7- ನಗರದಲ್ಲಿ ಆರಂಭವಾಗಿರುವ ಜಿಎಂ ವಿಶ್ವ ವಿದ್ಯಾಲಯದ ಪ್ರಥಮ ಉಪಕುಲಪತಿಗಳಾಗಿ ಡಾ. ಎಸ್. ಆರ್. ಶಂಕಪಾಲ್ ಅಧಿಕಾರ ಸ್ವೀಕರಿಸಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘ ಅನುಭವವಿರುವ ಇವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಈ ಹಿಂದೆ ಅವರು ಎಂ.ಎಸ್. ರಾಮಯ್ಯ ಯುನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್‌ನ ಕುಲಪತಿಗಳಾಗಿ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. 85ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. 9 ತಾಂತ್ರಿಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಶಿಕ್ಷಣದ ಜ್ಞಾನಾರ್ಜನೆಗೆ ಹಲವಾರು ದೇಶಗಳ 30ಕ್ಕೂ ಹೆಚ್ಚಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಅಪಾರ ಅನುಭವ ಪಡೆದವರಾಗಿದ್ದಾರೆ.

# 3 ದಿನ ಅದ್ಧೂರಿ ರಾಜ್ಯೋತ್ಸವ ಆಚರಣೆ

## ಪಾಲಿಕೆಯ ಪೂರ್ವಭಾವಿ ಸಭೆಯಲ್ಲಿ ಕನ್ನಡ ಪರ ಸಂಘಟನೆಗಳ ಒತ್ತಾಯ



ದಾವಣಗೆರೆ, ನ.7- ಮೂರು ದಿನಗಳ ಕಾಲ ಅದ್ಧೂರಿಯಾಗಿ ಕನ್ನಡ ರಾಜ್ಯೋತ್ಸವ ಆಚರಿಸುವಂತೆ ಕನ್ನಡಪರ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಸೋಮವಾರ ಕರೆಯಲಾಗಿದ್ದ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಈ ಒತ್ತಾಯ ಕೇಳಿ ಬಂತು.

ಕನ್ನಡ ಪರ ಹೋರಾಟಗಾರ ಕೆ.ಜಿ. ಶಿವಕುಮಾರ್, ಕೊರೊನಾ ಹಿನ್ನೆಲೆಯಲ್ಲಿ ಹಿಂದಿನ ವರ್ಷಗಳ ಆಚರಣೆ ಕಳೆಗುಂದಿತ್ತು. ಆದರೆ ಈ ಬಾರಿ ಅದ್ಧೂರಿ ಆಚರಣೆಗೆ ಅವಕಾಶವಿದೆ. ಆದ್ದರಿಂದ ನವೆಂಬರ್ ತಿಂಗಳ ಕೊನೆಯ ಮೂರು ದಿನಗಳಲ್ಲಿ ಅದ್ಧೂರಿಯಾಗಿ ಆಚರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಡಳಿತದಿಂದ ಸರ್ಕಾರದ ಆದೇಶದ ಪಾಲನೆ ಮಾಡಲು ರಾಜ್ಯೋತ್ಸವ ಆಚರಿಸಲಾಗುತ್ತದೆ. ಆದರೆ ಪಾಲಿಕೆ ಆಚರಣೆಯೇ ಬೇರೆ. ಎಲ್ಲಾ ಸಂಘಟನೆಗಳು ಸೇರಿ ಇಲ್ಲಿ ಆಚರಿಸುವುದು ಐತಿಹಾಸಿಕ ಕಾರ್ಯಕ್ರಮ ಎಂದರು.

ಮುಖಂಡ ನಾಗೇಂದ್ರ ಬಂಡೀಕರ್ ಮಾತನಾಡಿ, ಪಾಲಿಕೆಯ ಆರೋಗ್ಯ ನಿರೀಕ್ಷಕರಿಂದ ಆಂಗ್ಲ ನಾಮಫಲಕ ಇರುವ ಮಳಿಗೆಗಳ ಪಟ್ಟಿ ಮಾಡಿ ದಂಡ ಹಾಕಿಸುವಂತೆ ಸಲಹೆ ನೀಡಿದು.

ಮಕ್ಕಳ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಫ್ರಾನ್ಸಿಸ್, ಭಾಷೆ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲು ಮಕ್ಕಳಿಗಾಗಿ ಕಾರ್ಯಕ್ರಮ ರೂಪಿಸುವಂತೆ ಹೇಳಿದರು.

ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಇದ್ದರೂ, ಪಾಲಿಕೆಯಿಂದ ಆಚರಿಸುವ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಹಿಳೆಯರನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿದ ಕನ್ನಡ ಚಳವಳಿ ಮಹಿಳಾ ಅಧ್ಯಕ್ಷೆ ಶುಭ ಮಂಗಳ, ಸನ್ಮಾನಕ್ಕೆ ವಯೋಮಿತಿ ಬೇಡ ಎಂದರು.

ಪಾಲಿಕೆ ಮೇಯರ್ ಬಿ.ಹೆಚ್. ವಿನಾಯಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಉಪ ಮೇಯರ್ ಯಶೋಧ ಹೆಗ್ಗಪ್ಪ, ವಿವಿಧ ಸ್ಥಾಯಿ ಸಮಿತಿ ಸದಸ್ಯರುಗಳಾದ ಎ. ನಾಗರಾಜ್, ಅಬ್ದುಲ್ ಲತೀಫ್, ಉದಯ್ ಕುಮಾರ್, ಶಿವಾನಂದ್, ಪಾಲಿಕೆ ಅಧಿಕಾರಿ ಶ್ರವಣ್ ಇತರರು ವೇದಿಕೆ ಮೇಲಿದ್ದರು.

ವಿವಿಧ ಸಂಘಟನೆಗಳ ಮುಖಂಡರುಗಳಾದ ರಾಮೇಗೌಡ, ಸೋಮಲಾಪುರದ ಹನುಮಂತಪ್ಪ, ಪರ್ವೇಜ್, ಮುಬಾರಕ್, ರಮೇಶ್ ಜಯರಾಮ್ ವತನ್, ಶಿವಕುಮಾರ್ ಪಿ. ಸುಂಕಾಪುರ್, ಕೆ.ಎಂ. ಶಿವಮೂರ್ತಯ್ಯ, ಆರ್.ಬಿ. ಸಂಗೀತ, ದಾಕ್ಷಾಯಣಮ್ಮ, ರಾಜೇಶ್ವರಿ ಟಿ.ಎಂ., ದೀಪಾ ಟಿ.ಎಂ., ಮೇಘ, ನೌಶಿನ್ ತಾಜ್, ಲಕ್ಷ್ಮಿ, ಸನ್ಮಾಬಾನು, ಫೌಜಿಯಾ ಬಾನು, ವಿಜಯ್ ಜಾಧವ್, ಗೀತಾ ಟಿ.ಶಿವಕುಮಾರ್, ದಾದಾಪೀರ್, ಲಕ್ಷ್ಮಿದೇವಿ ದಯಾನಂದ್, ಜಿ.ಎಸ್. ಸೋಮಶೇಖರ್, ಬಿ.ಜಯಪ್ರಕಾಶ್, ಬಿ.ಆರ್. ರವಿಕುಮಾರ್ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

### ರಾಜ್ಯೋತ್ಸವ ಆಚರಣೆಗೆ 50 ಲಕ್ಷ ಅನುದಾನ ಕಾಯ್ದಿರಿಸಲಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನ

ಈ ಬಾರಿ ಪಾಲಿಕೆಯಿಂದ ರಾಜ್ಯೋತ್ಸವ ಆಚರಣೆಗೆ 50 ಲಕ್ಷ ರೂ. ಅನುದಾನ ಕಾಯ್ದಿರಿಸಲಿ ಎಂದು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್ ಒತ್ತಾಯಿಸಿದ್ದಾರೆ.

ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕರ್ನಾಟಕ ಎಂದು ನಾಮಾಂಕಿತಗೊಂಡು ಐವತ್ತು ವರ್ಷ ಕಳೆದ ಹಿನ್ನೆಲೆಯಲ್ಲಿ ಸಾವಿರಾರು ಸಂಖ್ಯೆಯ ಬೃಹತ್ ಮೆರವಣಿಗೆ ನಡೆಸಲು ಚಿಂತಿಸಬೇಕಿದೆ ಎಂದರು.

ತಮಿಳುನಾಡು, ಗುಜರಾತ್ ಮುಂತಾದ ರಾಜ್ಯಗಳಲ್ಲಿ ಪಾಲಿಕೆಗಳಿಂದಲೇ ನಿರ್ದಿಷ್ಟ ಅಳತೆಯ ಸ್ಥಳೀಯ ಭಾಷೆಗಳಲ್ಲಿಯೇ ನಾಮಫಲಕ ಬರೆದಿರುತ್ತಾರೆ. ಅದೇ ರೀತಿ ದಾವಣಗೆರೆಯಲ್ಲೂ ಕ್ರಮ ತೆಗೆದುಕೊಳ್ಳಬೇಕು. ಭಾಷೆ ಉಳಿವಿನ ಬಗ್ಗೆ ಇರುವ ಜವಾಬ್ದಾರಿಯನ್ನು ಮಳಿಗೆಗಳ ಮಾಲೀಕರಿಗೆ ಮನವರಿಗೆ ಮಾಡಿಕೊಡಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನದ ಮಾದರಿಯಲ್ಲಿ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಾಹಿತ್ಯದ ಗೋಷ್ಠಿ, ಕವಿಗೋಷ್ಠಿಗಳನ್ನು ಒಂದು ಇಡೀ ದಿನ ಆಯೋಜಿಸಬೇಕು. ಅಲ್ಲಿ ಪುಸ್ತಕ ಮಾರಾಟಕ್ಕೂ ಅವಕಾಶ ನೀಡಬೇಕು ಎಂದು ಸಲಹೆ ನೀಡಿದರು.

# ಪಾಲಿಕೆಯಲ್ಲಿ ಆಂಗ್ಲ ನಾಮಫಲಕ: ಕರವೇ ಪ್ರತಿಭಟನೆ



ದಾವಣಗೆರೆ, ನ.7- ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಕರ್ನಾಟಕ ರಾಜ್ಯೋತ್ಸವದ ಪೂರ್ವಭಾವಿ ಸಭೆಯಲ್ಲಿ ಆಂಗ್ಲ ನಾಮ ಫಲಕಗಳಿಗೆ ಕಡಿವಾಣ ಹಾಕುವಂತೆ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಒತ್ತಾಯಿಸಿದರು.

ಮಾಲ್‌ಗಳಲ್ಲಿ, ಐಷರಾಮಿ ಹೋಟೆಲ್‌ಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು. ಕನ್ನಡಿಗರಿಗೆ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದರು.

ಸಭೆಯ ನಂತರ ಪಾಲಿಕೆಯಲ್ಲಿ ಆಂಗ್ಲ ನಾಮ ಫಲಕಗಳು ಎದ್ದು ಕಾಣುತ್ತಿತ್ತು ಅಂತ ನಾಮಫಲಕಗಳನ್ನು ಹರಿದು ಹಾಕುವ ಮೂಲಕ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಗಿರೀಶ್ ಕುಮಾರ್, ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಲೋಕೇಶ್, ಯುವ ಘಟಕದ ಅಧ್ಯಕ್ಷ ಗೋಪಾಲ್ ದೇವರಮನಿ, ನಗರ ಉಪಾಧ್ಯಕ್ಷ ಜಿ.ಎಸ್. ಸಂತೋಷ್, ದಾದಾಪೀರ್, ಸಾಕಮ್ಮ ಮತ್ತಿತರರು ಉಪಸ್ಥಿತರಿದ್ದರು.

# ರಾಣೇಬೆನ್ನೂರು : ಕ್ಯಾಂಪಸ್ ಕ್ಲಿಕ್ ಕಂಪನಿ ಕಾರ್ಯಾಗಾರ



ರಾಣೇಬೆನ್ನೂರು, ನ.7- ಇಲ್ಲಿನ ಶ್ರಿ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿ ನ. 2 ಮತ್ತು 3 ರಂದು ಬೆಂಗಳೂರಿನ ಕ್ಯಾಂಪಸ್ ಕ್ಲಿಕ್ ಕಂಪನಿಯವರು ಆಯೋಜಿಸಿದ್ದ ಎರಡು ದಿನದ ಪರ್ಸನಾಲಿಟಿ ಇಂಪ್ರೂವ್ ಮೆಂಟ್ ಕಾರ್ಯಾಗಾರದಲ್ಲಿ 180 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ತರಬೇತಿದಾರ ಎಂ. ಟಿ. ಅರಸು , ತರಬೇತಿ ಮತ್ತು ಉದ್ಯೋಗ ಅಧಿಕಾರಿ ಡಾ. ಡಿ.ಎಸ್.ವಿಶ್ವನಾಥ್, ಡಾ. ಎಸ್. ಜಿ . ಮಾಕನೂರು, ಪ್ರೊ.ಕೆ.ಎನ್.ದಾನೇಶ್, ಪ್ರೊ. ಎಸ್. ಲೋಕೇಶ್ ಇತರರಿದ್ದರು.

# ಅಂತರ್ ಕಾಲೇಜು ಚೆಸ್ ಪಂದ್ಯಾವಳಿಗೆ ಚಾಲನೆ




ದಾವಣಗೆರೆ, ನ.7- ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್ಮೆಂಟ್ ಅಂಡ್ ರಿಸರ್ಚ್ ವತಿಯಿಂದ ನಗರದ ಬಾಪೂಜಿ ಎಂಬಿಎ ಕಾಲೇಜಿನಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ಚೆಸ್ ಪಂದ್ಯಾವಳಿಗೆ ಸೋಮವಾರ ಚಾಲನೆ ನೀಡಲಾಯಿತು. ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್ ಪ್ರಾಂಶುಪಾಲ ಡಾ.ಬಿ. ವೀರಪ್ಪ ಪಂದ್ಯಾವಳಿಗೆ ಚಾಲನೆ ನೀಡಿದರು. ಭರಮಸಾಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೈಹಿಕ ಶಿಕ್ಷಕ ಡಾ. ವೀರೇಂದ್ರ, ದಾವಣಗೆರೆ ವಿವಿ ಕ್ರೀಡಾಧಿಕಾರಿ ಬಿ.ವೀರಪ್ಪ, ಡಾ. ಸ್ವಾಮಿ ತ್ರಿಭುವನಾನಂದ ಹಾಗು ಇತರರು ಈ ಸಂದರ್ಭದಲ್ಲಿದ್ದರು.

# ಭತ್ತ ಬೆಂಬಲ ಬೆಲೆ ಜಾಗೃತಿಗೆ ಸೂಚನೆ

(1ನೇ ಪುಟದಿಂದ) ಅವರಲ್ಲಿ ಅರಿವು ಮೂಡಿಸುವಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ ಅನುಷ್ಠಾನ ನೆರವಾಗುತ್ತದೆ. ಈ ನಿಟ್ಟಿನಲ್ಲಿ ಕೇಂದ್ರದ ಕನಿಷ್ಠ ಬೆಂಬಲ ಬೆಲೆ ಯೋಜನೆ ಅನುಷ್ಠಾನಕ್ಕಾಗಿ ಜಿಲ್ಲೆಯಿಂದ ಪ್ರಸ್ತಾವನೆ ಸಲ್ಲಿಸಲಾಗುವುದು. ಖರೀದಿ ಕೇಂದ್ರ ತೆರೆಯಲು ಅವಶ್ಯವಾದ ಎಲ್ಲ ಸಿದ್ದತೆ ನಡೆಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಪಿಎಂಸಿ ಅಧಿಕಾರಿಗಳು ಭತ್ತ ಖರೀದಿ ಕೇಂದ್ರಗಳಿಗೆ ಕಂಪ್ಯೂಟರ್, ಪೀಠೋಪಕರಣಗಳು, ಸಿಸಿ ಟಿವಿ ಕ್ಯಾಮರಾ ಹಾಗೂ ರೈತರಿಂದ ಭತ್ತ ಹಾಗೂ ರಾಗಿಯನ್ನು ಖರೀದಿಸುವಾಗ ವಿಡಿಯೋ ವ್ಯವಸ್ಥೆ ಮಾಡಬೇಕು. ರಾಗಿಗೆ ಬೆಂಬಲ ಬೆಲೆ ಹೆಚ್ಚಾಗಿರುವ ಕಾರಣ ರೈತರನ್ನು ಹೆಚ್ಚು ರಾಗಿ ಬೆಳೆಯಲು ಪ್ರೋತ್ಸಾಹಿಸಬೇಕು.

ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಭತ್ತ ಖರೀದಿ ಕುರಿತು ಜಿಲ್ಲಾ ವ್ಯಾಪ್ತಿಯಲ್ಲಿ ರೈತರಿಗೆ ಹೆಚ್ಚು ಪ್ರಚಾರ ಮಾಡಬೇಕು ಹಾಗೂ ಖರೀದಿ ಕೇಂದ್ರಗಳಲ್ಲಿ ತಾಂತ್ರಿಕ ದೋಷಗಳನ್ನು ಪರಿಹರಿಸಬೇಕು ಎಂದರು.

ರೈತರಿಂದ ಖರೀದಿಸಿದ ಭತ್ತವನ್ನು ಸಾರವರ್ಧಿತ ಅಕ್ಕಿ ತಯಾರಿಸುವ ಯಂತ್ರವನ್ನು ಅಳವಡಿಸುವ ಅಕ್ಕಿ ಗಿರಣಿಗಳಿಗೆ ಹಲ್ಲಿಂಗ್ ಮಾಡಲು ನೀಡಲಾಗುತ್ತದೆ ಎಂದರು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಶಿದ್ರಾಮ ಮಾರಿಹಾಳ್, ಎ.ಪಿ.ಎಂ.ಸಿ ಸಹಾಯಕ ನಿರ್ದೇಶಕ ಗಣೇಶ್, ಎ.ಪಿ.ಎಂ.ಸಿ ಕಾರ್ಯದರ್ಶಿ ಗಿರೀಶ್ ಉಪಸ್ಥಿತರಿದ್ದರು.

# ಹೆದ್ದಾರಿಯಲ್ಲಿ ಇಷ್ಟಲಿಂಗ ಪೂಜೆ

(1ನೇ ಪುಟದಿಂದ) ಸಾಲಿ ಸಮಾಜದವರಿಗೆ ಮೀಸಲಾತಿ ಕೊಡುವ ವಿಚಾರದಲ್ಲಿ ತೋರಿದ ಉದಾಸೀನತೆಯಿಂದಾ ಗಿಯೇ ಹಿಂದಿನ ಬಿಜೆಪಿ ಸರ್ಕಾರ ಅಧಿಕಾರ ಕಳೆದುಕೊಳ್ಳುವಂತಾಯಿತು. ಈಗಿನ ಕಾಂಗ್ರೆಸ್ ಸಹ ನಮ್ಮ ಸಮಾಜದ ಬೇಡಿಕೆಯನ್ನು ಅಲಕ್ಷಿಸಿದರೆ ಅದು ಮುಂದಿನ ಲೋಕಸಭೆ ಚುನಾವಣೆ ಫಲಿತಾಂಶ ಸರ್ಕಾರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ ಎಂದರು.

ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಮಾತನಾಡಿ, ನ. 10ರಂದು ನಗರದಲ್ಲಿ ನಡೆಯುವ ಹೋರಾಟದಲ್ಲಿ ಐದು ಸಾವಿರಕ್ಕೂ ಅನೇಕ ಜನರು ಭಾಗವಹಿಸುವ ನಿರೀಕ್ಷೆ ಇದೆ. ಇದು ಸಮಾಜದ ಹೋರಾಟದ ಕಾರ್ಯಕ್ರಮ ವಾಗಿದ್ದು ವಿಷಯ ತಿಳಿದು ಎಲ್ಲರೂ ಭಾಗವಹಿಸಬೇಕಾದ ಸಂದರ್ಭ ಇದಾಗಿದೆ. ಆದ್ದರಿಂದ ಸಮಾಜದ ಸ್ವಾಮೀಜಿ ಇರಲಿ, ಸಾಮಾನ್ಯರೇ ಇರಲಿ ಯಾರಿಗೂ ಪ್ರತ್ಯೇಕ ಆಹ್ವಾನ ನೀಡುವುದಿಲ್ಲ ಎಂದರು.

ಪಂಚಮಸಾಲಿ ಸಮಾಜದ ಪ್ರಮುಖರಾದ ಅಶೋಕ ಗೋಪನಾಳ, ಬಿ.ಜೆ. ಅಜಯಕುಮಾರ್, ಬಕ್ಕೇಶ್, ಓಂಕಾರಪ್ಪ, ಈಶ್ವರಪ್ಪ, ಮಾಲತೇಶ್, ಮಂಜುನಾಥ್ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಕಾರ್ಪೊರೇಟ್ ಶೈಲಿಯ ಬಹುಮಾನ

(1ನೇ ಪುಟದಿಂದ) ಆದರೆ, ಹಗರಣದ ರೂವಾರಿ ಸುಭಾಷ್ ಇನ್ನೂ ತಲೆ ಮರೆಸಿಕೊಂಡಿದ್ದಾನೆ.

ಈ ಹಗರಣದಲ್ಲಿ ಭಾಗಿಯಾದ ಎರಡನೇ ಹಂತದ ವಂಚಕರು ಕೋಟಿಗಟ್ಟಲೆ ಹಣ ಗಳಿಸಿದ್ದಾರೆ. ಅವರನ್ನು ಬಂಧಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸುಮಾರು 70 ರಿಂದ 80 ವಂಚಕರು ತಲಾ 2 ಕೋಟಿ ರೂ.ಗಳಿಗೂ ಹೆಚ್ಚು ಹಣ ಗಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ವಂಚಕರು 'ಕೊರ್ವಿಯೋ ಕಾಯಿನ್' ಎಂಬ ಹೆಸರಿನ ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡುವಂತೆ ಜನರನ್ನು ಸೆಳೆಯುತ್ತಿದ್ದರು. ಈ ಕ್ರಿಪ್ಟೋ ಕರೆನ್ಸಿಗಳಿಗಾಗಿ ನಕಲಿ ವೆಬ್‌ಸೈಟ್‌ಗಳನ್ನು ಸೃಷ್ಟಿಸಲಾಗಿತ್ತು. ಕೃತಕವಾಗಿ ಇವುಗಳ ಬೆಲೆ ಹೆಚ್ಚಾಗುವಂತೆ ಮಾಡಲಾಗುತ್ತಿತ್ತು.

ಅಪಪ್ರಚಾರ, ವಂಚನೆ ಹಾಗೂ ಬೆದರಿಕೆಯ ಮೂಲಕ ಅಮಾಯಕರನ್ನು ಸುಲಿಗೆ ಮಾಡಲಾಗುತ್ತಿತ್ತು. ಈ ಪ್ರಕರಣದಲ್ಲಿ ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯೂ ಭಾಗಿಯಾಗಿದ್ದಾರೆ. ಬಹಳಷ್ಟು ಜನರು ಹಣ ಕಳೆದುಕೊಂಡಿದ್ದರೆ, ಕೆಲವರು ಬೇರೆ ಹೂಡಿಕೆದಾರರನ್ನು ಕರೆ ತರುವ ಮೂಲಕ ಲಾಭ ಮಾಡಿಕೊಂಡಿದ್ದಾರೆ. ಕೆಲವು ಸರ್ಕಾರಿ ಉದ್ಯೋಗಿಗಳು ಸ್ವಯಂ ನಿವೃತ್ತಿ ಪಡೆದು ಈ ಕ್ರಿಪ್ಟೋದ ಪ್ರಚಾರದಲ್ಲಿ ತೊಡಗಿಕೊಂಡಿದ್ದರು.

# ಕೇಂದ್ರದಿಂದ ಬರ ಪರಿಹಾರ ಕೊಡಿಸುವಲ್ಲಿ ಸಂಸದರು ವಿಫಲ: ಕಲ್ಲೇಶ್ ರಾಜ್ ಪಟೇಲ್

ದಾವಣಗೆರೆ, ನ.7- ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕೇಂದ್ರ ಸರ್ಕಾರದಿಂದ ಬರ ಪರಿಹಾರದ ಹಣ ಕೊಡಿಸಲು ವಿಫಲರಾಗಿದ್ದಾರೆ ಎಂದು ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್ ಟೀಕಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವೇಶ್ವರ ಹಗಡೆ ಕಾಗೇರಿ ಹಾಗೂ ಸಂಸದ ಸಿದ್ದೇಶ್ವರ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಜಿಲ್ಲೆಯಲ್ಲಿ ಬರ ವೀಕ್ಷಣೆ ಮಾಡಿರುವುದು ನಾಟಕೀಯ ಎಂದವರು ಆರೋಪಿಸಿದರು.

ಈಗಾಗಲೇ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಿದ್ದು, ಕೇಂದ್ರ ತಂಡ ಬರ ಪರಿಶೀಲನೆ ನಡೆಸಿ, ಜಿಲ್ಲಾಡಳಿತದಿಂದ ಮಾಹಿತಿ ಸಂಗ್ರಹಿಸಿ ತೆರಳಿದೆ. ಕೇಂದ್ರ ತಂಡ ಬಂದಾಗ ಅವರ ಜೊತೆಗೆ ರೈತರ ಜಮೀನುಗಳಿಗೆ ತೆರಳಿ ನಿರ್ಲಕ್ಷ್ಯ ವಹಿಸಿದ ಬಿಜೆಪಿ ನಾಯಕರು ಈಗ ನಾಟಕವಾಡುತ್ತಿದ್ದಾರೆ ಎಂದು ಆರೋಪಿಸಿದರು.

ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯೂ ತಾವಾಗಿರುವುದಾಗಿ ಕಲ್ಲೇಶ್ ರಾಜ್ ಪಟೇಲ್ ಹೇಳಿದರು.

# ವರ್ಷವಿಡೀ ಕನ್ನಡದ ಜಾಗೃತಿ ಯಶಸ್ವಿಯಾಗಿ ನಡೆಯಬೇಕು

**ಹೊನ್ನಾಳಿ ಹೊನ್ನುಡಿ ಕನ್ನಡ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕ ಡಿ.ಜಿ.ಶಾಂತನಗೌಡ**

ಹೊನ್ನಾಳಿ, ನ. 7 - ಒಂದು ದಿನದ ಆಚರಣೆಗೆ ಸೀಮಿತಗೊಳ್ಳುವ ಈ ಸಂದರ್ಭದಲ್ಲಿ ಹೊನ್ನುಡಿ ಕನ್ನಡ ವೇದಿಕೆ ಸುವರ್ಣ ಕರ್ನಾಟಕ ಸಂಭ್ರಮದ ಹಿನ್ನೆಲೆಯಲ್ಲಿ ಹಮ್ಮಿಕ್ರೊಳ್ಳುವ ಕನ್ನಡ ನಾಡು ನುಡಿಯ ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವಂತಾಗಲಿ ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಹೊನ್ನುಡಿ ಕನ್ನಡ ವೇದಿಕೆಯ ಉದ್ಘಾಟನೆ ಹಾಗೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಭ್ರಮಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೊನ್ನಾಳಿ ಶ್ರೀ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿಗಳು ಮಾತನಾಡಿ, ವೇದಿಕೆಯ ಅಭಿಪ್ರಾಯ ಉತ್ತಮವಾಗಿದ್ದು, ಯುವಕರಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ಯುವಕರಿಗಾ ಗಿಯೇ ಶಾಲೆಗಳ ರೀತಿಯಲ್ಲಿಯೇ ತರಬೇತಿ ನೀಡಿದರೆ ಒಳಿತು. ಇಂದಿನ ಕನ್ನಡ ಶಿಕ್ಷಕರಲ್ಲಿ ಹಳೆಗನ್ನಡದ ಅಧ್ಯಯನ ತಿಳಿದಿರಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿ ವೇದಿಕೆಯ ಆಶಯಗಳು ಆರಂಭದಲ್ಲಿನ ಉತ್ಸಾಹವು ಉದ್ಘಾಟನಾ ಸಮಾರಂಭಕ್ಕೆ ಸೀಮಿತಗೊಳ್ಳದೆ ನಿರಂತರವಾಗಿ ನಡೆಯುವಂತಾಗಲಿ ಎಂದರು.

ವೇದಿಕೆಯ ಅಧ್ಯಕ್ಷ ಎಂ.ಪಿ.ಎಂ. ಷಣ್ಮುಖಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೊನ್ನುಡಿ ಕನ್ನಡ ವೇದಿಕೆ ಹುಟ್ಟುಹಾಕಿದ್ದು, ಈ ವೇದಿಕೆಯ ಮೂಲಕ 50 ಪುಸ್ತಕಗಳ ಪ್ರಕಟಣೆಯ ಗುರಿ ಹೊಂದಲಾಗಿದೆ ಎಂದು ತಿಳಿಸಿ, ವರ್ಷದ ಕೊನೆಯಲ್ಲಿ ಜಾನಪದ ಸಾಹಿತ್ಯ ಸಮ್ಮೇಳನ ನಡೆಸಲು ತೀರ್ಮಾನಿಸಿದೆ. 13 ಗ್ರಾಮ ಪಂಚಾಯಿತಿಗಳಲ್ಲಿ ಈಗಾಗಲೇ ದಿನಾಂಕ ನಿಗದಿಗೊಳಿಸಿ, ಕನ್ನಡ ಕಾರ್ಯಕ್ರಮಗಳನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೊನ್ನುಡಿ ಯೂ ಟ್ಯೂಬ್ ವಾಹಿನಿಯನ್ನು ಉದ್ಘಾಟಿಸಿದರು.

ನಿವೃತ್ತ ಶಿಕ್ಷಣಾಧಿಕಾರಿ ಮೈಸೂರು ಭರಮಪ್ಪ ಅವರು ಕನ್ನಡ ನಾಡು, ನುಡಿ, ಸಾಂಸ್ಕೃತಿಕ ಹಿರಿಮೆಗಳ ಕುರಿತು ಉಪನ್ಯಾಸ ನೀಡಿದರು.

ನಿವೃತ್ತ ಶಿಕ್ಷಕ ಕೆ. ರುದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಹೊನ್ನುಡಿ ಕನ್ನಡ ವೇದಿಕೆಯ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಹೊನ್ನುಡಿ ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಅತಿಥಿಗಳಾಗಿ ಬಿ.ಇ.ಓ., ನಂಜರಾಜ್, ಸಾಹಿತಿ ಡಿ.ಶಿವರುದ್ರಪ್ಪ, ಸಾಸ್ವೆಹಳ್ಳಿಯ ಕೆ.ಪಿ. ದೇವೇಂದ್ರಪ್ಪ, ಕಲಾವಿದರಾದ ಎಂ.ಎಸ್. ರೇವಣಪ್ಪ, ಎಂ.ಪಿ.ಎಂ. ಚನ್ನಬಸಯ್ಯ ವೇದಿಕೆಯ ಕಾರ್ಯದರ್ಶಿ ಡಿ.ಎಂ. ಮಂಜುನಾಥ, ಖಜಾಂಚಿ ಶಕೀಲ್ ಅಹಮ್ಮದ್ ಇತರರು ಇದ್ದರು.

ರಾಮಾಚಾರಿ ಪ್ರಾರ್ಥಿಸಿದರು. ಪ್ರತಿಮಾ ಸ್ವಾಗತಿಸಿದರು, ಕೆ.ಆರ್. ಶಾರದಾ ಮಹೇಶ್ವರ ನಿರೂಪಿಸಿದರೆ, ಎನ್.ಎಚ್.ರವಿಗೌಡ ವಂದಿಸಿದರು.




# ಪರೀಕ್ಷೆ ವಂಚಕ

(1ನೇ ಪುಟದಿಂದ) ಬರಬೇಕು ಹಾಗೂ ಅವರ ಮೇಲೆ ಕ್ರಮ ಆಗಬೇಕು ಎಂಬುದು ನಮ್ಮ ಉದ್ದೇಶ ಎಂದವರು ಹೇಳಿದ್ದಾರೆ. ಹಗರಣದ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದುಗೊಳಿಸುವುದು ಹಾಗೂ ಮರು ಪರೀಕ್ಷೆ ನಡೆಸುವ ಬಗ್ಗೆ ಕೆ.ಇ.ಎ. ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಮತ್ತೊಂದು ಪ್ರಶ್ನೆಗೆ ಅವರು ಉತ್ತರಿಸಿದರು. ಈ ನಡುವೆ ಹೇಳಿಕೆ ನೀಡಿರುವ ಶಾಸಕ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಚಿವರು ಹಾಗೂ ಶಾಸಕರೊಬ್ಬರು ಪಾಟೀಲ್ ಪರಾರಿಯಾಗಲು ನೆರವಾಗಿದ್ದಾರೆ. ಇಡೀ ಕಾಂಗ್ರೆಸ್ ಪಕ್ಷ ಆರೋಪಿಗೆ ಬೆಂಬಲಿಸಿದೆ. ಆರ್.ಡಿ. ಪಾಟೀಲ್ ಕಾಂಗ್ರೆಸ್ ಪಕ್ಷದ ದೊಡ್ಡವರ ಸಂಪರ್ಕದಲ್ಲಿದ್ದಾನೆ. ಹೀಗಾಗಿಯೇ ತಪ್ಪಿಸಿಕೊಳ್ಳಲು ನೆರವು ನೀಡಲಾಗಿದೆ ಎಂದು ಆರೋಪಿಸಿದ್ದಾರೆ.

# ತೆಂಗು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಒತ್ತಾಯ




**ಅಖಿಲ ಭಾರತ ರೈತ ಕೃಷಿ ಕಾರ್ಮಿಕ ಸಂಘಟನೆಯಿಂದ ಪ್ರತಿಭಟನೆ, ಮನವಿ ಸಲ್ಲಿಕೆ**

ದಾವಣಗೆರೆ, ನ. 7- ತೆಂಗು ಬೆಳೆಗಾರರ ನೆರವಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಧಾವಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕ ಸಂಘಟನೆ ಜಿಲ್ಲಾ ಸಮಿತಿ ವತಿಯಿಂದ ನಗರದ ಉಪ ವಿಭಾಗಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಕೇಂದ್ರ ಸರ್ಕಾರವು ಒಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.20,000 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು. ರಾಜ್ಯ ಸರ್ಕಾರದಿಂದ ಒಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.5,000 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು.


ಜಿಲ್ಲೆಯಲ್ಲಿ ತೆಂಗು ಬೆಳೆಯುವಂತಹ ಪ್ರದೇಶವನ್ನು ಗುರುತಿಸಿ ಅಲ್ಲಿ ತೆಂಗು ಉತ್ಪನ್ನಗಳ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ತೆಂಗು ಸಂರಕ್ಷಣಾ ಗೋದಾಮುಗಳನ್ನು ಸ್ಥಾಪಿಸಬೇಕು. ಪ್ರತಿ ಹೋಬಳಿಗೆ ಸರ್ಕಾರದ ಒಂದು ಖರೀದಿ ಕೇಂದ್ರವನ್ನು ತೆರೆಯಬೇಕು. ರಾಜ್ಯ ಸರ್ಕಾರ ತೆಂಗಿನಕಾಯಿ ಮತ್ತು ಕೊಬ್ಬರಿಯನ್ನು ಖರೀದಿಸಿ ಪಡಿತರ ಜನತಾ ಬಜಾರ್ ಮೂಲಕ ಜನರಿಗೆ ಒದಗಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಯಿತು.

ಎ.ಐ.ಕೆ.ಕೆ.ಎಂ.ಎಸ್.ನ ರಾಷ್ಟ್ರೀಯ ನಾಯಕ ಡಾ|| ಟಿ.ಎಸ್. ಸುನಿತ್‌ಕು ಮಾರ್, ಜಿಲ್ಲಾಧ್ಯಕ್ಷ ಮಧು ತೊಗಲೇರಿ, ಕಾರ್ಯದರ್ಶಿಗಳಾದ ನಾಗಸ್ಮಿತಾ, ಮಂಜುನಾಥ್ ರೆಡ್ಡಿ, ನಾಗರಾಜ್ ರಾಮಗೊಂಡನಹಳ್ಳಿ, ಹನುಮಂತಪ್ಪ, ಸಿದ್ದೇಶ್ ಆನಗೋಡು, ನಿಂಗಪ್ಪ ಅಸ ಗೋಡು, ಮಂಜುನಾಥ್ ಮ್ಯಾಸರಹಳ್ಳಿ ಇತರರು ಭಾಗವಹಿಸಿದ್ದರು.

# ವೈರಸ್‌ನ ಕುತ್ತಿಗೆಗೆ ಗಂಟು ಬೀಳುವ ಇನ್ನೊಂದು ವೈರಸ್

## ವೈರಸ್‌ಗಳ ಸಮರದ ನಡುವೆ ಕಾಣುತ್ತಿದೆ ಆಂಟಿವೈರಸ್ ಔಷಧಗಳ ಸಂಶೋಧನೆಯ ಹಾದಿ

ಕ್ಯಾಟೊನ್ಸ್‌ವಿಲ್ಲೆ (ಅಮೆರಿಕ), ನ. 7 - ಕೆಟ್ಟ ಶೀತ ತರುವಂತಹ ವೈರಸ್‌ಗೇ ಕಾಟ ನೀಡುವಂತಹ ಏನಾದರೂ ಇರಬಹುದಾ ಎಂದು ಯೋಚಿಸಿರುವಿರಾ? ಹಾಗಾದರೆ ನಿಮಗೆ ಸಮಾಧಾನ ತರುವಂತಹ ವಿಷಯ ಇದೆ. ವೈರಸ್‌ಗೂ ರೋಗ ಉಂಟಾಗುತ್ತದೆ. ಇನ್ನೂ ಸಂತೋಷಕರ ಎಂದರೆ ವೈರಸ್ ರೋಗಕ್ಕೆ ಕಾರಣವಾಗುವುದೂ ಇನ್ನೊಂದು ವೈರಸ್!



ಅಂದ ಹಾಗೆ, ವೈರಸ್‌ಗೆ ರೋಗ ಬರುವುದು ಎಂದರೆ, ಅದರ ಸಾಮಾನ್ಯ ಕಾರ್ಯನಿರ್ವಹಣೆ ಕುಂಠಿತವಾಗುವುದು ಎಂದರ್ಥ. ವೈರಸ್ ಜೀವಕೋಶದಲ್ಲಿ ಸೇರಿದಾಗ, ಅದು ಒಂದೋ ನಿಷ್ಕ್ರಿಯವಾಗಿರುತ್ತದೆ ಇಲ್ಲವೇ ತಕ್ಷಣವೇ ಪುನರುತ್ಪತ್ತಿ ಆರಂಭಿಸುತ್ತದೆ.

ವೈರಸ್‌ಗಳು ಪುನರುತ್ಪತ್ತಿಯಾಗುವುದರಿಂದ ಜೀವಕೋಶವೇ ವೈರಸ್‌ಗಳ ಉತ್ಪಾದನಾ ಕಾರ್ಖಾನೆಯಂತಾಗುತ್ತದೆ. ನಂತರ ಈ ವೈರಸ್‌ಗಳು ಬೇರೆ ಜೀವಕೋಶಗಳಿಗೂ ಹರಡುತ್ತವೆ ಎಂದು ಅಮೆರಿಕದ ಬಾಲ್ಟಿಮೋರ್ ಕೌಂಟಿಯ ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ಉಪನ್ಯಾಸಕ ಐವಾನ್ ಎರಿಲ್ ತಿಳಿಸುತ್ತಾರೆ.

ಕೆಲವೊಮ್ಮೆ ವೈರಸ್ ಜೀವಕೋಶದಲ್ಲಿ ಸೇರಿದಾಗ, ಅದಾಗಲೇ ಮತ್ತೊಂದು ನಿಷ್ಕ್ರಿಯ ವೈರಸ್ ಠಿಕಾಣಿ ಹೂಡಿರುವುದು ಕಂಡು ಬರುತ್ತದೆ. ನಂತರ ಜೀವಕೋಶದ ನಿಯಂತ್ರಣಕ್ಕಾಗಿ ಎರಡೂ ವೈರಸ್‌ಗಳ ನಡುವೆ ಸಂಘರ್ಷವೂ ನಡೆಯುತ್ತದೆ ಎಂದು ಎರಿಲ್ ವಿವರಿಸುತ್ತಾರೆ.

ಇನ್ನೂ ಕೆಲವೊಮ್ಮೆ ವೈರಸ್ ಬಂದಾಗ, ಇನ್ನೊಂದು ವೈರಸ್ ನಿಷ್ಕ್ರಿಯವಾಗಿರುವ ಬದಲು, ಒಳ ಬರುವ ವೈರಸ್ ಅನ್ನೇ ಬೇಟೆ ಮಾಡುತ್ತದೆ!

ಜೈವಿಕ ಮಾಹಿತಿ ಶಾಸ್ತ್ರಜ್ಞನಾಗಿ ಕಾರ್ಯನಿರ್ವಹಿಸುವ ವೇಳೆ ಈ ವೈರಸ್‌ಗಳ ನಡುವಿನ ಸಮರವನ್ನು ಹಲವಾರು ಬಾರಿ ಗುರುತಿಸಿದ್ದೇನೆ. ಆದರೆ, ಈಗ ವೈರಸ್ ಒಂದು ಇನ್ನೊಂದು ವೈರಸ್‌ನ ಕುತ್ತಿಗೆಗೆ ಗಂಟು ಬೀಳುವುದು ಕಂಡುಬಂದಿದೆ ಎಂದು ಎರಿಲ್ ಹೇಳುತ್ತಾರೆ.

**ವೈರಸ್ ಬೇಟೆ ಹೊಸದಲ್ಲ :** ಒಂದು ವೈರಸ್, ಇನ್ನೊಂದು ವೈರಸ್ ಅನ್ನು ಬೇಟೆ ಆಡುವುದು ಜೀವಶಾಸ್ತ್ರಜ್ಞರಿಗೆ ಹೊಸ ವಿಷಯವೇನೂ ಅಲ್ಲ. 1973ರಲ್ಲೇ ಹ್ಯಾಕ್ಟೀರಿಯೋಫೇಜ್ ಪಿ2 ಎಂಬ ವೈರಸ್‌ನ ಈ ರೀತಿಯ ವರ್ತನೆಯನ್ನು ಗುರುತಿಸಲಾಗಿತ್ತು.

ಸೆಟಲೈಟ್ ವೈರಸ್ ಹಾಗೂ ಹೆಲ್ಪರ್ ವೈರಸ್‌ಗಳೆಂಬ ಎರಡು ರೀತಿಯ ವೈರಸ್‌ಗಳಿರುತ್ತವೆ. ಸೆಟಲೈಟ್ ವೈರಸ್‌ಗಳು ತಾವಾಗಿಯೇ ಸೋಂಕಿಗೆ ಕಾರಣವಾಗುವುದಿಲ್ಲ. ಇವುಗಳು ಸೋಂಕು ಹರಡಲು ಹೆಲ್ಪರ್ ವೈರಸ್‌ಗಳ ಅಗತ್ಯವಿರುತ್ತದೆ. ಇದರ ಮುಂದಿನ ಹಂತದಲ್ಲಿ 2003ರಲ್ಲಿ ಅತಿ ದೊಡ್ಡ ಗಾತ್ರದ ಮಿಮಿವೈರಸ್ ಪತ್ತೆ ಮಾಡಲಾಗಿತ್ತು. ಈ ಮಿಮಿವೈರಸ್‌ಗೆ ಸ್ಪುಟ್ನಿಕ್ ಎಂಬ ಸೆಟಲೈಟ್ ವೈರಸ್ ಗಂಟು ಹಾಕಿಕೊಂಡಿರುವುದೂ ಪತ್ತೆಯಾಗಿತ್ತು.

**ಎಲ್ಲೆಡೆ ಸೆಟಲೈಟ್ - ಹೆಲ್ಪರ್ :** ಪ್ರತಿಯೊಂದು ಜೀವರಾಶಿಯಲ್ಲೂ ಸೆಟಲೈಟ್ - ಹೆಲ್ಪರ್ ವೈರಸ್ ವ್ಯವಸ್ಥೆ ಕಂಡು ಬರುತ್ತದೆ. ಆದರೆ, ಜೀವರಾಶಿಯಲ್ಲಿ ಇವುಗಳ ಪ್ರಾಮುಖ್ಯತೆಯನ್ನು ಸೂಕ್ತ ರೀತಿಯಲ್ಲಿ ಮಾನ್ಯತೆ ಮಾಡಿಲ್ಲ ಎಂದು ಎರಿಲ್ ಅಭಿಪ್ರಾಯ ಪಡುತ್ತಾರೆ.

ಸೆಟಲೈಟ್ ಹಾಗೂ ಹೆಲ್ಪರ್ ವೈರಸ್‌ಗಳು ಸೇರಿಕೊಂಡು ರೋಗಕಾರಕವಾಗುತ್ತವೆ. ಅಷ್ಟೇ ಅಲ್ಲದೇ, ಜೀವವಿಕಾಸದಲ್ಲಿ ಮಹತ್ವದ ಪಾತ್ರವನ್ನೂ ವಹಿಸುತ್ತವೆ.

ಸೆಟಲೈಟ್ ಹಾಗೂ ಹೆಲ್ಪರ್ ವೈರಸ್‌ಗಳು ಪರಸ್ಪರ ಸಮರದಲ್ಲೂ ತೊಡಗಿರುತ್ತವೆ. ಒಂದನ್ನೊಂದು ಮೀರಿ ಮುಂದೆ ಸಾಗುವ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. ಇವು ಪರಸ್ಪರ ವಿನಾಶದ ಸಮರದಲ್ಲಿ ತೊಡಗಿರುವಾಗಲೇ, ಮತ್ತೊಂದು ಆಸಕ್ತಿಕರ ವಿಷಯ ಹುಟ್ಟಿಕೊಳ್ಳುತ್ತದೆ. ಅದೇ ಆಂಟಿ ವೈರಸ್‌ಗಳು. ಬ್ಯಾಕ್ಟೀರಿಯಾಗಳಲ್ಲಿ ಆಂಟಿವೈರಲ್ ವ್ಯವಸ್ಥೆ ಇರುವುದು ಇತ್ತೀಚಿನ ಅಧ್ಯಯನದಲ್ಲಿ ಕಂಡು ಬಂದಿದೆ. ಹೆಲ್ಪರ್ ವೈರಸ್ ಹಾಗೂ ಸೆಟಲೈಟ್ ವೈರಸ್‌ಗಳ ನಡುವಿನ ಸಮರವೇ ಆಂಟಿವೈರಸ್‌ಗಳಿಗೂ ದಾರಿ ಮಾಡಿಕೊಡುತ್ತದೆ ಎಂಬುದು ವಿಪರ್ಯಾಸ. ಸೆಟಲೈಟ್ ಹಾಗೂ ಹೆಲ್ಪರ್ ವೈರಸ್‌ಗಳ ನಡುವಿನ ಈ ಮೇಲಾಟ, ಆಂಟಿವೈರಲ್ ಔಷಧಗಳ ಸಂಶೋಧನೆಗೆ ಮಹತ್ವದ ದಾರಿ ಮಾಡಿಕೊಡುತ್ತದೆ.

**ಕಲಿಯುವುದು ಸಾಕಷ್ಟಿದೆ :** ಆಂಟಿವೈರಸ್‌ಗಳ ಕಾರ್ಯನಿರ್ವಹಣೆ ಅರ್ಥಮಾಡಿಕೊಳ್ಳಬೇಕಾದಲ್ಲಿ ಸೆಟಲೈಟ್ ವೈರಲ್‌ಗಳ ಅಧ್ಯಯನ ಮಹತ್ವದ್ದಾಗಿದೆ. ಈ ದಿಸೆಯಲ್ಲಿ ಕಲಿಯುವುದು ಇನ್ನೂ ಸಾಕಷ್ಟಿದೆ.

ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ಸಂಶೋಧಕರು ಮಣ್ಣಿನಲ್ಲಿ ಕಂಡು ಬರುವ ಸ್ಟ್ರೆಪ್ಟೊಮೈಸಿಸ್ ಸ್ಕಾಬೀ ಎಂಬ ಬ್ಯಾಕ್ಟೀರಿಯಾದಲ್ಲಿ ಮಿನಿಪ್ಲೇಯರ್ ಎಂಬ ಸೆಟಲೈಟ್ ವೈರಸ್ ಕಂಡು ಹಿಡಿದಿದ್ದಾರೆ. ಇದು ಸ್ಟ್ರೆಪ್ಟೊಮೈಸಿಸ್ ಬ್ಯಾಕ್ಟೀರಿಯಾದಲ್ಲಿ ಕಂಡು ಬರುವ ಮೈಂಡ್‌ಪ್ಲೇಯರ್ ಎಂಬ ಹೆಲ್ಪರ್ ವೈರಸ್ ಜೊತೆ ನಿಕಟವಾಗಿ ಗುರುತಿಸಲ್ಪಟ್ಟಿದೆ.

ಆದರೆ, ಮಿನಿಪ್ಲೇಯರ್ ಸಾಮಾನ್ಯ ಸೆಟಲೈಟ್ ವೈರಸ್ ಅಲ್ಲ ಎಂಬುದು ಕಂಡುಬಂದಿದೆ. ಸಾಮಾನ್ಯ ಸೆಟಲೈಟ್ ವೈರಸ್ ರೀತಿ ಇದು ಹೆಲ್ಪರ್ ವೈರಸ್‌ಗೆ ಕಾಯುವುದಿಲ್ಲ. ಜೀವವಿಕಾಸದ ಸಿದ್ಧಾಂತಗಳನ್ನು ಮೀರಿ, ತಾನೇ ಕಾರ್ಯತತ್ಪರವಾಗುತ್ತದೆ. ಮಿನಿಪ್ಲೇಯರ್ ಸಣ್ಣ ಭಾಗವೊಂದನ್ನು ಬೆಳೆಸಿಕೊಂಡಿದೆ. ಇದರ ಮೂಲಕ ಹೆಲ್ಪರ್ ವೈರಸ್‌ನ ಕತ್ತಿಗೆಗೆ ಗಂಟು ಬೀಳುತ್ತದೆ. ಇದು ಹೆಲ್ಪರ್ ವೈರಸ್‌ಗೆ ಗೊತ್ತೇ ಆಗುವುದಿಲ್ಲ. ನಂತರ ಹೆಲ್ಪರ್ ಹಾಗೂ ಮಿನಿಪ್ಲೇಯರ್ ವೈರಸ್‌ಗಳೆರಡೂ ಹೊಸ ಜೀವಕೋಶಕ್ಕೆ ಸೇರಿಕೊಳ್ಳುತ್ತವೆ.

ಮಿನಿಪ್ಲೇಯರ್ ಹಾಗೂ ಮೈಂಡ್‌ಪ್ಲೇಯರ್ ವೈರಸ್‌ಗಳ ದಾಳಿ ಹಾಗೂ ಪ್ರತಿದಾಳಿಗಳ ಕುರಿತು ಇನ್ನಷ್ಟು ಅಧ್ಯಯನಗಳು ನಡೆಯಬೇಕಿದೆ.

ಆಂಟಿವೈರಸ್ ಔಷಧಿಗಳ ಪೂರೈಕೆ ಸೀಮಿತವಾಗಿದೆ ಎಂಬುದು ಕೊರೊನಾ ಮಹಾಮಾರಿಯಿಂದ ಆದ ಅನಾಹುತಗಳು ತೋರಿಸುತ್ತವೆ. ವೈರಸ್‌ಗಳ ಕುರಿತ ಸಂಶೋಧನೆ ಸಂಕೀರ್ಣವಾಗಿದೆ. ವೈರಸ್‌ಗಳ ಅಧ್ಯಯನ ತೀವ್ರವಾದಷ್ಟೂ, ಮುಂಬರುವ ಸಮಸ್ಯೆಗಳನ್ನು ಎದುರಿಸಲು ನೆರವಾಗಲಿದೆ. ಮಿನಿಪ್ಲೇಯರ್ ತನ್ನ ಹೆಲ್ಪರ್ ವೈರಸ್‌ನ ಗುತ್ತಿಗೆಗೆ ಅಂಟಿಕೊಳ್ಳುವ ಸಾಮರ್ಥ್ಯ ಪರಿಗಣಿಸಿದಾಗ, ಆಂಟಿವೈರಸ್ ಸಂಶೋಧನೆಯಲ್ಲಿ ಮಹತ್ವ ಪಡೆದಿದೆ ಎಂದು ಎರಿಲ್ ಅಭಿಪ್ರಾಯಪಟ್ಟಿದ್ದಾರೆ.

# ಅಂಚೆ ಕಚೇರಿ ಸೇವೆ ಶ್ಲಾಘನೀಯ



**ಸಿರಿಗೆರೆ ಕಾರ್ಯಕ್ರಮದಲ್ಲಿ ಪ್ರೊ|| ಎಸ್.ಬಿ. ರಂಗನಾಥ್**

ಸಿರಿಗೆರೆ, ನ. 7 - ಜಗತ್ತಿನಲ್ಲಿ ಅತ್ಯಂತ ದೊಡ್ಡ ಸೇವಾ ಜಾಲವನ್ನು ಹೊಂದಿರುವ ಭಾರತೀಯ ಅಂಚೆ ಇಲಾಖೆಯ ಸೇವೆ ಅತ್ಯಂತ ಶ್ಲಾಘನೀಯ. ತನ್ನ ವಿಶ್ವಾಸಾರ್ಹತೆ ಹಾಗೂ ಪ್ರಾಮಾಣಿಕತೆಗಳಿಂದಾಗಿ ಸಾರ್ವಜನಿಕರಲ್ಲಿ ಅದು ದೃಢ ನಂಬಿಕೆಯನ್ನು ಉಳಿಸಿಕೊಂಡಿದೆ ಎಂದು ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ|| ಎಸ್.ಬಿ. ರಂಗನಾಥ್ ತಿಳಿಸಿದರು.

ಸಿರಿಗೆರೆ ಅಂಚೆ ಕಚೇರಿಯಲ್ಲಿ ಅಂಚೆ ಇಲಾಖೆಯ ಜನಸಂಪರ್ಕ ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು 'ಇಲಾಖೆಯ ಅಧಿಕಾರಿಗಳು ಅದರ ಜನಸ್ನೇಹಿ ಯೋಜನೆಗಳನ್ನು ಇಂತಹ ಅಭಿಯಾನದ ಮೂಲಕ ಜನರಿಗೆ ಪರಿಚಯಿಸಬೇಕು' ಎಂದು ಹೇಳಿದರು.

ಅಂಚೆ ಇಲಾಖೆಯ ಚಿತ್ರದುರ್ಗ ಜಿಲ್ಲಾ ಅಧೀಕ್ಷಕ ಚಂದ್ರಶೇಖರ್, ಸಿರಿಗೆರೆ ಅಂಚೆ ಕಚೇರಿಯು ಗ್ರಾಮಾಂತರ ಪ್ರದೇಶದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದೆ ಎಂದರು. ಅಂಚೆ ಇಲಾಖೆಯು ಒಂದು ಸೂರಿನಡಿ ನೂರು ಸೇವೆಗಳನ್ನು ಒದಗಿಸುತ್ತಿದೆ ಎಂದರು.

ಉಪ ಅಧೀಕ್ಷಕರಾದ ಅನಿಲ್ ಕುಮಾರ್, ಬ್ಯಾಂಕಿಂಗ್ ಸೇವೆಯಿಂದ ಮೊದಲ್ಗೊಂಡು ಪಾಸ್‌ಪೋರ್ಟ್, ಆಧಾರ್ ಗುರುತಿನ ಚೀಟಿವರೆಗೆ ಅನಂತ ಸೌಲಭ್ಯಗಳನ್ನು ಅಂಚೆ ಕಚೇರಿಯಿಂದ ಪಡೆಯಬಹುದು ಎಂದರು. ಸಿರಿಗೆರೆ ಅಂಚೆ ಕಚೇರಿ ಮುಖ್ಯಸ್ಥ ಏಕಾಂತಪ್ಪ ಅಧ್ಯಕ್ಷತೆ ವಹಿಸಿದ್ದರು. ಅಂಚೆ ಮೇಲ್ವಿಚಾರಕ ಚೇತನ್‌ಕುಮಾರ್ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

# ಅನ್‌ಮೋಲ್‌ನಲ್ಲಿ ರಾಜ್ಯೋತ್ಸವ



ದಾವಣಗೆರೆ, ನ. 7 - ಶಿರಮಗೊಂಡನಹಳ್ಳಿಯ ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ 'ಕನ್ನಡ ರಾಜ್ಯೋತ್ಸವ' ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲ ಯು. ಕೊಟ್ರೇಶ್ ಕಾರ್ಯಕ್ರಮದ ಅಧ್ಯಕ್ಷತೆ ವ ಹಿಸಿದ್ದರು.

ಕನ್ನಡ ಸಹ ಶಿಕ್ಷಕಿ ಟಿ.ಹೆಚ್. ಸಂಗೀತ ಮಾತನಾಡಿ, ಕನ್ನಡ ನಾಡು ತನ್ನದೇ ಆದ ಭವ್ಯ ಪರಂಪರೆಯನ್ನು ಹೊಂದಿದೆ. ನಾವೆಲ್ಲರೂ ಕನ್ನಡಿಗರೆನ್ನುವುದರ ಬಗ್ಗೆ ನಮಗೆ ಹೆಮ್ಮೆಯಿರಬೇಕು. ನಾವು ಕೇವಲ ನವೆಂಬರ್ ಕನ್ನಡಿಗರಾಗದೇ, ನಾಡಿನ ಜವಾಬ್ದಾರಿಯುತ ಪ್ರಜೆಯಾಗಿ ಕನ್ನಡದಲ್ಲೇ ಮಾತನಾಡಬೇಕು, ಬರೆಯಬೇಕು. ನಿತ್ಯ ವ್ಯವಹಾರದಲ್ಲಿ ಕನ್ನಡವನ್ನೇ ಬಳಸಬೇಕು. ಕನ್ನಡೇತರರಿಗೆ ನಾವು ಕನ್ನಡ ಕಲಿಸಬೇಕು. ನಮ್ಮ ನಾಡು, ನುಡಿ, ಸಂಸ್ಕೃತಿ, ಪರಂಪರೆ ಉಳಿಸಲು ಸದಾ ಕಟಿಬದ್ಧರಾಗಿರಬೇಕು ಎಂದು ತಿಳಿಸಿದರು.

# ಮೌನೇಶ್ವರ ಬಡಾವಣೆಯಲ್ಲಿ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ



ದಾವಣಗೆರೆ, ನ. 7 - ನಗರದ ಮೌನೇಶ್ವರ ಬಡಾವಣೆ ನಾಗರಿಕ ಹಿತ ರಕ್ಷಣಾ ಸಮಿತಿಯಿಂದ ರಾಜ್ಯೋತ್ಸವ ಆಚರಿಸಲಾಯಿತು. ಗೌರವಾಧ್ಯಕ್ಷರಾದ ಬಿ. ಲೋಕೇಶ್, ಸಮಿತಿಯ ಅಧ್ಯಕ್ಷ ಬಿ.ಎಸ್. ನಾಯಕ್, ಕಾರ್ಯದರ್ಶಿ ಜಿ.ಬಿ. ಜಗದೀಶ್ ಮತ್ತು ಖಜಾಂಚಿ ರುದ್ರ ಮುನೇಶ್ವರ ಹಾಗೂ ಅನೇಕ ಪದಾಧಿಕಾರಿಗಳು, ನಾಗರಿಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ರಾಣೇಬೆನ್ನೂರು ಕಸಾಪದಲ್ಲಿ ರಾಜ್ಯೋತ್ಸವ



ರಾಣೇಬೆನ್ನೂರು, ನ. 7- ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಾಲಯದಲ್ಲಿ ಧ್ವಜವಂದನೆಯೊಂದಿಗೆ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ವರ್ತಕ ಸಂಘದ ಅಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ಕಸಾಪ ಅಧ್ಯಕ್ಷ ವೀರೇಶ್ ಜಂಬಗಿ, ನಗರಸಭೆ ಸದಸ್ಯೆ ಪ್ರಭಾವತಿ ತಿಳವಳ್ಳಿ, ಜಗದೀಶ, ಪ್ರಭಾಕರ ಶಿಗ್ಲಿ ಮತ್ತಿತರರಿದ್ದರು.

# ಶಿಕ್ಷಣಕ್ಕೆ ಪ್ರೋತ್ಸಾಹಿಸಿದರೆ ಮಾತ್ರ ದಾರ್ಶನಿಕರ ಜಯಂತಿಗಳಿಗೆ ಅರ್ಥ



**ದಿಂಡದಳ್ಳಿ ಗ್ರಾಮದಲ್ಲಿನ ವಾಲ್ಮೀಕಿ ಜಯಂತ್ಯೋತ್ಸವ ದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ**

ಮಾಯಕೊಂಡ, ನ. 7 - 'ಶಿಕ್ಷಣವನ್ನು ಪ್ರೋತ್ಸಾಹಿಸುವ ಮತ್ತು ಬಡವರಿಗೆ ನೆರವಾಗುವ ಮೂಲಕ ದಾರ್ಶನಿಕರ ಜಯಂತಿ ಆಚರಿಸುವದರಿಂದ ಅವರಿಗೆ ನಿಜವಾಗಿ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಅಭಿಪ್ರಾಯಪಟ್ಟರು.

ತಾಲ್ಲೂಕಿನ ದಿಂಡದಳ್ಳಿ ಗ್ರಾಮದಲ್ಲಿ ಭಾನುವಾರ ನಡೆದ ವಾಲ್ಮೀಕಿ ಜಯಂತಿಯಲ್ಲಿ ಅವರು ಮಾತನಾಡಿದರು.

'ಬಸವಣ್ಣ, ಕನಕದಾಸ, ಅಂಬೇಡ್ಕರ್, ರಾಯಣ್ಣ ನಂತಹ ಮಹಾನ್ ದಾರ್ಶನಿಕರ ಜಯಂತಿಗಳನ್ನು ಕೇವಲ ಅದ್ದೂರಿಯಾಗಿ ಆಚರಿಸಿದರೆ ಸಾಲದು, ಅರ್ಥಪೂರ್ಣವಾಗಿ ಆಚರಿಸಬೇಕು. ಶಿಕ್ಷಣವನ್ನು ಪ್ರೋತ್ಸಾಹಿಸಿ, ಬಡ ವಿದ್ಯಾರ್ಥಿಗಳಿಗೆ ನೆರವು ನೀಡಿದರೆ ನಿಜವಾದ ಅರ್ಥದಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಗುತ್ತದೆ. ನಾವು ವಾಲ್ಮೀಕಿ ಅಂಬೇಡ್ಕರ್ ರಷ್ಟು ಎತ್ತರಕ್ಕೆ ಬೆಳೆಯದಿದ್ದರೂ, ನಮ್ಮ ಅಕ್ಕಪಕ್ಕದ ದುರ್ಬಲರಿಗೆ ಸಹಾಯ ಮಾಡಿ ಸೌಲಭ್ಯ ಒದಗಿಸಿದರೆ, ಸಮಾಜ ಉದ್ದಾರವಾಗುವುದರಲ್ಲಿ ಸಂಶಯವಿಲ್ಲ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಉಚಿತ ಬಸ್ ಪ್ರಯಾಣ, ಉಚಿತ ವಿದ್ಯುತ್, ಉಚಿತ ಅಕ್ಕಿ ನೀಡಿದ್ದಲ್ಲದೇ ಗೃಹಲಕ್ಷ್ಮಿ ಯೋಜನೆ ಅಡಿಯಲ್ಲಿ ಪ್ರತಿ ಕುಟುಂಬಕ್ಕೆ ತಿಂಗಳಿಗೆ ರೂ.2000 ಉಚಿತವಾಗಿ ನೀಡಿ ಜನಸಾಮಾನ್ಯರಿಗೆ ನೆರವಾಗಿದೆ. ಯುವಕರು ಗೃಹಲಕ್ಷ್ಮಿ ಯೋಜನೆ ಹಣ ತಲುಪದ ಫಲಾನುಭವಿಗಳ ಪಟ್ಟಿ ತಂದರೆ ಸರಿಪಡಿಸುವ ವ್ಯವಸ್ಥೆ ಮಾಡುತ್ತೇನೆ. ಗ್ರಾಮಕ್ಕೆ ಶುದ್ದ ಕುಡಿಯುವ ನೀರಿನ ಘಟಕ ಸೇರಿ ಹಲವು ಬೇಡಿಕೆ ಶೀಘ್ರ ಈಡೇರಿಸುವುದಾಗಿ ಅವರು ಭರವಸೆ ನೀಡಿದರು.

ಮುಖಂಡ ಮಂಜುನಾಥ್, ಗಣೇಶ್, ಪರಶುರಾಮ್, ಪ್ರಶಾಂತ್, ದೇವೇಂದ್ರಪ್ಪ ಕೃಷ್ಣಮೂರ್ತಿ, ನಾಗರಾಜ್, ಏಳುಕೋಟೆಪ್ಪ ಮತ್ತು, ವಾಲ್ಮೀಕಿ ಸಂಘದ ಸದಸ್ಯರು ಮತ್ತು ದಿಂಡದ ಹಳ್ಳಿಯ ಗ್ರಾಮಸ್ಥರು ಇದ್ದರು.

# ದಕ್ಷಿಣ ವಲಯ ಈಜು ಕ್ರೀಡಾಕೂಟಕ್ಕೆ ಚಾಲನೆ



ದಾವಣಗೆರೆ, ನ.7 - ನಗರದ ಹೊರ ವಲಯದಲ್ಲಿರುವ ಬಾಪೂಜಿ ವಿದ್ಯಾ ಸಂಸ್ಥೆಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿಯುತ ಶಾಲೆ ಶಿವಗಂಗೋತ್ರಿ ತೋಳಹುಣಸೆಯಲ್ಲಿ ಸಿಬಿಎಸ್‌ಇ ದಕ್ಷಿಣ ವಲಯ ಈಜು ಕ್ರೀಡಾಕೂಟ-2023 ಅದ್ಧೂರಿಯಾಗಿ ಪ್ರಾರಂಭವಾಯಿತು.

ಶಾಲೆಯ ಸುಸಜ್ಜಿತ ಈಜುಗೋಳದಲ್ಲಿ ಅ. 30ರಿಂದ ನ. 2 ರವರೆಗೆ ನಡೆಯುವ ಈ ಕ್ರೀಡಾಕೂಟದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಕೇರಳ ಮತ್ತು ಡಿಯು-ಡಮನ್, ನಗರ-ಹವೇಲಿ ಕೇಂದ್ರಾಡಳಿತ ಪ್ರದೇಶಗಳ 11, 14, 17 ಮತ್ತು 19 ವರ್ಷದೊಳಗಿನ ಬಾಲಕ, ಬಾಲಕಿಯರು ಸುಮಾರು 2,500 ಈಜು ಸ್ಪರ್ಧೆಗಳು ಭಾಗವಹಿಸುತ್ತಿದ್ದಾರೆ.

ಶಾಲೆಯ ಸುಂದರ ಪರಿಸರದ ಮಡಿಲಿನಲ್ಲಿರುವ ಸುಸಜ್ಜಿತ ಈಜುಗೊಳದಲ್ಲಿ ಈಜು ಕ್ರೀಡಾಪಟುಗಳು ಮೀನುಗಳು ಸಹ ನಾಚುವ ಹಾಗೆ ಈಜಿ ಪ್ರೇಕ್ಷಕರನ್ನು ಕಣ್ಮನ ತಣಿಸುತ್ತಿದ್ದಾರೆ.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿಬಿಎಸ್‌ಇ ಮಾಹಿತಿ ತಂತ್ರಜ್ಞಾನದ ಸಹಾಯಕ ಕಾರ್ಯದರ್ಶಿ ರಾಹುಲ್ ಸಿಂಗ್ ರಾಠೋಡ್ ಅವರು ಕ್ರೀಡಾಪಟುಗಳನ್ನು ಉದ್ದೇಶಿಸಿ, ಸೋಲು-ಗೆಲುವುಗಳನ್ನು ಸಮನಾಗಿ ಸ್ವೀಕರಿಸಬೇಕು. ಕ್ರೀಡೆಯಲ್ಲಿ ಭಾಗವಹಿಸುವುದು ಬಹಳ ಮುಖ್ಯ ಎಂದು ತಿಳಿಸಿದರು.

ಸಂಗೀತ ಶಿಕ್ಷಕ ಮಂಜುನಾಥ್ ಕೋತ್ ಪ್ರಾರ್ಥನಾ ಗೀತೆಯನ್ನು ಹೇಳಿದರು. ನೃತ್ಯ ಶಿಕ್ಷಕಿ ಭಾರ್ಗವಿ ಮತ್ತು ಸೌಂದರ್ಯ ಅವರ ಮಧುರಾಷ್ಟಕಂ ಭರತನಾಟ್ಯ ಮತ್ತು ವಿದ್ಯಾರ್ಥಿ ಆರ್ಯ ಸಿದ್ದೇಶ್ ನೃತ್ಯ ಪ್ರದರ್ಶನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ಸ್ವಾಗತಿಸಿ, ಈಜು ಕ್ರೀಡಾಪಟುಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಶಿಕ್ಷಕಿಯರಾದ ಯುವರಾಣಿ ಮತ್ತು ಅಕ್ಷತಾ ಅವರು ಕಾರ್ಯಕ್ರಮ ನಿರೂಪಿಸಿದರು. ಕ್ರೀಡಾಕೂಟದ ವೀಕ್ಷಕ ಸಿದ್ದು ಕೆರೆಸೂರು ಪ್ರಾಂಶುಪಾಲರಾದ ಜೆ. ಎಸ್. ವನಿತಾ, ಕಮಲ್ ಬಿ. ಎನ್, ಪ್ರೀತಿ ಸಿಂಗ್, ಅರುಣ್ ಪ್ರಸಾದ್, ರಾಜೇಶ್ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

# ಮಾರ್ಫ್, ಡೀಪ್ ಫೇಕ್ ವಿಡಿಯೋ ತೆಗೆದು ಹಾಕಿ

(1ನೇ ಪುಟದಿಂದ) ಎಲ್ಲಾ ಸಾಮಾಜಿಕ ಜಾಲತಾಣಗಳ ಕಂಪನಿಗಳು ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಸಾಮಾಜಿಕ ಜಾಲತಾಣ ಕಂಪನಿಗಳಿಗೆ ಬಾಧ್ಯತೆ ಇದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಸಾಮಾಜಿಕ ಜಾಲತಾಣ ಕಂಪನಿಗಳು ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳದೇ ಇದ್ದ ಸಂದರ್ಭದಲ್ಲಿ ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯ ಕ್ರಮ ತೆಗೆದುಕೊಳ್ಳಲಿದೆ ಎಂದೂ ಮೂಲಗಳು ಹೇಳಿವೆ.

ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ ಯಾವುದೇ ಸಾಮಾಜಿಕ ಜಾಲತಾಣ ಕಂಪನಿಯು ನಕಲಿ ವಿಡಿಯೋಗಳಿಗೆ ಅವಕಾಶ ನೀಡಬಾರದು. ಡೀಪ್‌ಫೇಕ್ ವಿಡಿಯೋಗಳು ತೀವ್ರ ಅಪಾಯ ತರುತ್ತಿದ್ದು, ಈ ಬಗ್ಗೆ ಕಂಪನಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ.

# ಎಸ್‌ಜೆವಿಪಿ ಆವರಣದಲ್ಲಿ ಪಟಾಕಿ ಮಳಿಗೆಗಳಿಗೆ ಅನುಮತಿ ಬೇಡ : ಕ.ದ.ಸಂ. ಸಮಿತಿ ಆಗ್ರಹ

**ಹರಿಹರ**

ಹರಿಹರ, ನ.7- ನಗರದ ಎಸ್‌ಜೆವಿಪಿ ಕಾಲೇಜ್ ಆವರಣದಲ್ಲಿ ತಾತ್ಕಾಲಿಕ ಪಟಾಕಿ ಮಳಿಗೆಗಳಿಗೆ ಅನುಮತಿ ನೀಡದಿರುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಘಟಕ ಒತ್ತಾಯಿಸಿದೆ.

ಸದರಿ ಜಾಗದಲ್ಲಿ ಶಾಲೆ, ಪೆಟ್ರೋಲ್ ಬಂಕ್, ವಾಸೋಪಯೋಗಿ ಮನೆಗಳು ಇದ್ದು ಜನದಟ್ಟಣೆ ಹೆಚ್ಚಾಗಿರುವುದರಿಂದ ಹೆಚ್ಚು ಸುರಕ್ಷಿತವಲ್ಲ. ಅಲ್ಲದೆ ಜಾಗ ಶೈಕ್ಷಣಿಕ ಬಳಕೆಯಲ್ಲಿದ್ದು ವಾಣಿಜ್ಯ ಉಪಯೋಗಕ್ಕಾಗಿ ಬಳಸುವುದು ಸರಿಯಲ್ಲ. ಹಾಗಾಗಿ ಊರಿನ ಹೊರ ವಲಯದಲ್ಲಿ ಪರವಾನಗಿ ಪಡೆದಿರುವ ಪಟಾಕಿ ಅಂಗಡಿಗಳಿಗೆ ಮಾತ್ರ ಅವಕಾಶ ಕಲ್ಪಿಸುವಂತೆ, ತಾಲ್ಲೂಕು ಸಂಘದ ಅಧ್ಯಕ್ಷ ಎಂ.ಮಂಜುನಾಥ, ಸಂಚಾಲಕ ಜಿ.ಎಂ.ಮಂಜಪ್ಪ, ಸಂಘಟನಾ ಸಂಚಾಲಕ ಬಿ.ಎಂ.ಭಾಸ್ಕರ್ ಒತ್ತಾಯಿಸಿದ್ದಾರೆ.


**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಸಂಪರ್ಕಿಸಿ :
98860 97065

**ಡ್ರೈವರ್ಸ್ ಬೇಕಾಗಿದ್ದಾರೆ**
ಸ್ಮಾರ್ಟ್ ಸಿಟಿ ಕ್ಯಾಬ್ಸ್ ದಾವಣಗೆರೆ ಕ್ಯಾಬ್ ಡ್ರೈವರ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ :
81233 02057

**ಸೈಟ್ ಮಾರಾಟಕ್ಕೆ (KHB)**
ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ ಕರ್ನಾಟಕ ಹೌಸಿಂಗ್ ಬೋರ್ಡ್ 120 ಅಡಿ ರಸ್ತೆಗೆ 50X80 ಉತ್ತರ 40X60 ಉತ್ತರ. 60 ಅಡಿ ರಸ್ತೆಗೆ 40X40 W+S ಕಾರ್ನರ್ 40X60 ದಕ್ಷಿಣ 40X60 ಪೂರ್ವ 30x40 ದಕ್ಷಿಣ 30x40 ಪೂರ್ವ 30x40 ಉತ್ತರ
ಕಿರಣ್ ಬೂಸನೂರ್ (ಏಜೆಂಟ್)
98440 63409

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಹತ್ತಿರ ಗೀತಂ ಕಾಲೇಜ್ ಹತ್ತಿರ 30x50 South, 30x50 30x50 North ಅಕ್ಕ-ಪಕ್ಕ, 40x28 West, 30x40 South. Rate - 3100
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕಿದೆ**
30x50 ಅಳತೆಯ ಚಿಗಟೇರಿ ಲೇಔಟ್ ದಾವಣಗೆರೆ, ಪೂರ್ವ ದಿಕ್ಕು, 30x40 ಮಹಾಲಕ್ಷ್ಮಿ ಲೇಔಟ್, ದಾವಣಗೆರೆ. ಪಶ್ಚಿಮ ದಿಕ್ಕು.
78920 36003

**ಬಾಡಿಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
ದಕ್ಷಿತ್ ಐನಳ್ಳಿ ಏಜೆಂಟ್
77955 06795
ವಿದ್ಯಾ ನಗರದಲ್ಲಿ ನಾಲ್ಕು ಬೆಡ್ ರೂಮ್ ಮನೆ, ಡುಪ್ಲೆಕ್ಸ್ ಇಂಡಿಪೆಂಡೆಂಟ್ ಹೌಸ್

**ಜಮೀನು ಮಾರಾಟಕ್ಕಿದೆ**
ಸೊಕ್ಕೆ ಹೋಬಳಿ-ಮಾಗಡಿ ಗ್ರಾಮದ ಸ.ನಂ.ನಲ್ಲಿರುವ 5 ಎಕರೆ ಕೆಂಪು ಮಣ್ಣಿನಿಂದ ಕೂಡಿರುವ ಜಮೀನು ಮಾರಾಟಕ್ಕಿದೆ.
91108 75944

**ಲಿಂಗಾಯತ ವಧು ಬೇಕಾಗಿದೆ**
ವಯಸ್ಸು 60 ವರ್ಷ, 2ನೇ ಮದುವೆಗೆ ವಧು ಬೇಕಾಗಿದೆ. ಮಕ್ಕಳು ಇಲ್ಲದ ವಿಧವೆಯರು ಸಂಪರ್ಕಿಸಿ, ಪೆನ್ಷನ್ 30 ಸಾವಿರ ಬರುತ್ತದೆ. ಮನೆ ಬಾಡಿಗೆ ಬರುತ್ತದೆ. ಒಳ್ಳೆಯ ಮನೆತನದ ಹುಡುಗಿಯರು ಫೋಟೋ, ಬಯೋಡೇಟಾ ಕಳುಹಿಸಿ.
99457 21565

**ಹುಡುಗರು ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಮಳಿಗೆ ಬಾಡಿಗೆಗಿದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಶಂಕರ ಲೀಲಾ ಫ್ಯುಯಲ್ ಸ್ಟೇಷನ್
ಜೈನ್ ಟೆಂಪಲ್ ಪಕ್ಕ, ಆವರಗೆರೆ
90190 94446

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಕನಿಷ್ಟ ಓದಲು ಮತ್ತು ಬರೆಯಲು ಬರುವ ಹಾಗೂ ಅನುಭವವಿರುವ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
SRV ಅಸೋಸಿಯೇಟ್ಸ್, ದಾವಣಗೆರೆ.
ವಿದ್ಯಾನಗರ, ದಾವಣಗೆರೆ - 5
90355 36252, 73539 50027

**ಬೇಕಾಗಿದ್ದಾರೆ**
ದಾವಣಗೆರೆ ಪೇಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಡಿಸ್ಪ್ಯಾಚ್ ಇನ್ ಚಾರ್ಜ್, ಸ್ಟಾಕ್ ಇನ್ ಚಾರ್ಜ್ ಬೇಕಾಗಿದ್ದಾರೆ, ವಿವಾಹಿತ ಮಹಿಳೆಯರು, ಅರ್ಹ ಅಭ್ಯರ್ಥಿಗಳು ಸಂಪರ್ಕಿಸಬಹುದು.
94481 50174

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಸಿದ್ದವೀರಪ್ಪ ಹಾಗೂ ದಾವಣಗೆರೆ ಎಲ್ಲಾ ಬಡಾವಣೆಗಳ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ಸಂಪರ್ಕಿಸಿ :
97315 12365

**REQUIRED**
For a Prestigious College in Dvg required
Lab Instructor (CS/IS/AI & ML /Civil/RA)
Bus Drivers
Cook, Attenders
90199 64655

**NAME CLARIFICATION**
I, Suneel N S/o Nagaraja N R/o #848/3B, Near Fish Market, Renuka Badavane, Davangere bring to the notice of public that in some of my records my name is entered as Sunil N & in some records as Suneel N both belongs to me & none other else sworn before Davangere Notary on 6-11-23.
Sd/- Suneel N

**ಹೆಸರು ಸ್ಪಷ್ಟೀಕರಣ**
ಶ್ರೀಮತಿ ಚಂಪಕಲಾ ಕೋಂ ಡಿ.ಹೆಚ್. ಹನುಮಂತಪ್ಪ ವಯಸ್ಸು 34 ವರ್ಷ, ವಾಸ ಹರಳಹಳ್ಳಿ ಗ್ರಾಮ ಹಾಲಿವಾಣ ಪೋಸ್ಟ್ ಹರಿಹರ ತಾ|| ವಾಸಿಯಾದ ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ಆಗಿ ವಾಸವಾಗಿರುತ್ತೇನೆ, ನನ್ನ ಹೆಸರು ಆಧಾರ್ ಕಾರ್ಡ್‌ನಲ್ಲಿ ನಂ : 8463 7287 4277 ರಲ್ಲಿ 'ಚಂಪಕಲಾ ಹೆಚ್ ಈರಜ್ಜಿ' ಎಂದು ನಮೂದಾಗಿರುತ್ತದೆ. ಮತ್ತು ನನ್ನ ಹೆಸರು ಕೋಟಕ್ ಮಹೀಂದ್ರಾ ಪಾಸ್ ಬುಕ್ ಖಾತೆ ಸಂಖ್ಯೆ 242010003699 ರಲ್ಲಿ ಚಂಪಕಲಾ ಎಂದು ನಮೂದಾಗಿರುತ್ತದೆ. ಆದ ಕಾರಣ ಈ ಎರಡೂ ಹೆಸರುಗಳು ನನ್ನದೇ ಆಗಿರುತ್ತದೆ. ಸದರಿ ವ್ಯಕ್ತಿಗಳು ಒಬ್ಬರೇ ಆಗಿರುತ್ತಾರೆ ಎಂದು ದಿನಾಂಕ : 7.11.2023 ರಂದು ದಾವಣಗೆರೆ ನೋಟರಿಯಲ್ಲಿ ಪ್ರಮಾಣ ಪತ್ರವನ್ನು ಮಾಡಿರುತ್ತೇನೆ. ಚಂಪಕಲಾ

**NAME CLARIFICATION**
I Devaraj B.R. S/o A.R. Ramachandrappa, 44 yrs resident @ 5460/7, Akkamahadevi Nilaya, 7th cross, Siddaveerappa Badavane, Davangere. Above mentioned name in my Aadhar card and Pan card is correct but my name mentioned in my Passport as Devaraja Bennur Ramachandrappa s/o Ramachandrappa Anekonda Revanasiddappa. Further I write to state that above said two names are me only none one else. In future i will be using my name as Devaraj B.R S/o Ramachandrappa before Notary Davangere on 7.11.2023
Sd/- Devaraj B.R.

**ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸಕ್ಕೆ ಅನುಭವ ಇದ್ದವರು ಹಾಗೂ ಅನುಭವ ಇಲ್ಲದವರೂ ಸಹ ಬೇಕಾಗಿದ್ದಾರೆ. ವಿದ್ಯಾಭ್ಯಾಸ ಕನಿಷ್ಟ SSLC ವರೆಗೆ ಓದಿರುವ, ಚುರುಕಾದ ಹುಡುಗರು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ.
ತಿಂಗಳಿಗೆ ಸಂಬಳ 8 ರಿಂದ 10 ಸಾವಿರಗಳು.
ಕೆಲಸದ ಸಮಯ : ರಾತ್ರಿ 9 ರವರೆಗೆ.
ವಿಳಾಸ : ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
94483 39499

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**REQUIRED**
Marketing Executive
Kalpatru Plywoods #6, 1st main, Road, S. Nijalingappa Layout, Near Lakshmi floor mills, Davanagere.
94498 11142, 94483 41142

**WANTED**
S.V. Marketing Davangere
Marketing Executive
Above than 3 years experience. No age bar.
94480 46571, 78993 37571

**SHARP WANTED**
Sales and Service Executive (Diploma / ITI)
Office Boy 1 No. (SSLC)
*Gaurav Communications,* Davanagere.
94487 28866

**ಬೇಕಾಗಿದ್ದಾರೆ**
ಮನ್ವಿತ ಎಂಟರ್‌ಪ್ರೈಸಸ್
ದಾವಣಗೆರೆ ಪಿ.ಬಿ. ರಸ್ತೆ
* ಅಂಗಡಿಯಲ್ಲಿ ಕೆಲಸ ಮಾಡುವವರು
* ಮಾರ್ಕೆಟಿಂಗ್ ಕಲೆಕ್ಷನ್
* ಆಟೋ ಡ್ರೈವರ್ ಬೇಕಾಗಿದ್ದಾರೆ.
9448046571, 7899337571

**WANTED**
(Male or Female)
Mobile Shop work, Experienced
Sale Executive-1
Office Work (part time)-1
Bhosle Telecome
9886808412

## ಸಂಕ್ಷಿಪ್ತ ಸುದ್ದಿ

**ಛತ್ತೀಸ್‌ಘಡ : ಮೊದಲ ಹಂತದಲ್ಲಿ ಶೇ.71ರಷ್ಟು ಮತದಾನ**
ರಾಯಪುರ : ಛತ್ತೀಸ್‌ಘಡ ವಿಧಾನಸಭೆಯ 20 ಕ್ಷೇತ್ರಗಳಿಗೆ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಶೇ.71ರ ಮತದಾನವಾಗಿದೆ. ಮೊದಲ ಹಂತದಲ್ಲಿ ಚುನಾವಣೆ ನಡೆದ ಹಲವಾರು ಕ್ಷೇತ್ರಗಳು ನಕ್ಸಲ್ ಪೀಡಿತವಾಗಿದ್ದವು.

**ಪಂಚ ರಾಜ್ಯಗಳ ಚುನಾವಣೆಯಿಂದ ಐ.ಎನ್.ಡಿ.ಐ.ಎ. ಮೈತ್ರಿಕೂಟಕ್ಕೆ ಬಲ**
ನವದೆಹಲಿ : ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ.ದಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಆದರೆ, ವಿಧಾನಸಭಾ ಚುನಾವಣೆಯ ಫಲಿತಾಂಶಗಳು ಈ ಮೈತ್ರಿಕೂಟವನ್ನು ಮತ್ತಷ್ಟು ಬಲಪಡಿಸಲಿವೆ. ಚುನಾವಣೆ ನಂತರ ಮೈತ್ರಿಕೂಟವನ್ನು ಮತ್ತಷ್ಟು ಬಲಪಡಿಸಲಾಗುವುದು ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

**ಚೇತಕ್, ಚೀತಾ ಹೆಲಿಕಾಪ್ಟರ್ ಕೈ ಬಿಡಲು ಸೈನ್ಯದ ಚಿಂತನೆ**
ನವದೆಹಲಿ : 2027ರ ನಂತರ ಚೀತಾ ಹಾಗೂ ಚೇತಕ್ ಹೆಲಿಕಾಪ್ಟರ್‌ಗಳನ್ನು ಹಂತ ಹಂತವಾಗಿ ಕೈ ಬಿಡಲು ಸೈನ್ಯ ಪರಿಶೀಲಿಸುತ್ತಿದೆ. ಇವುಗಳ ಬದಲು ಹಗುರ ಹೆಲಿಕಾಪ್ಟರ್‌ಗಳನ್ನು ಸೇರ್ಪಡೆ ಮಾಡಿಕೊಳ್ಳುವ ಸಾಧ್ಯತೆ ಪರಿಶೀಲಿಸಲಾಗುವುದು ಎಂದು ಸೈನ್ಯದ ಮೂಲಗಳು ತಿಳಿಸಿವೆ.

**ಬಿಹಾರದ ಶೇ.34ರಷ್ಟು ಕುಟುಂಬಗಳ ದೈನಂದಿನ ಆದಾಯ 200 ರೂ.ಗಳಿಗಿಂತ ಕಡಿಮೆ**
ಪಾಟ್ನಾ : ಬಿಹಾರದ ಶೇ.34ರಷ್ಟು ಕುಟುಂಬಗಳ ಪ್ರತಿದಿನದ ಆದಾಯ 200 ರೂ.ಗಳಿಗೂ ಕಡಿಮೆ ಇದೆ. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಶೇ.43ರಷ್ಟು ಕುಟುಂಬಗಳು ಇದೇ ಮಟ್ಟದ ಆದಾಯ ಹೊಂದಿವೆ ಎಂದು ಬಿಹಾರದ ಜಾತಿ ಗಣತಿ ವರದಿಯಲ್ಲಿ ತಿಳಿಸಲಾಗಿದೆ.

**ಆದಿತ್ಯನಿಂದ ಸೂರ್ಯನ ಎಕ್ಸ್-ರೇ ಚಿತ್ರ ಸೆರೆ**
ಬೆಂಗಳೂರು : ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋದ ಮೊದಲ ಸೌರಯಾನ ಆದಿತ್ಯ ಎಲ್1, ಮೊದಲ ಬಾರಿಗೆ ಉನ್ನತ ಚೈತನ್ಯದ ಸೂರ್ಯ ಬೆಂಕಿಯ ಎಕ್ಸ್- ರೇ ದೃಶ್ಯವನ್ನು ಸೆರೆ ಹಿಡಿದಿದೆ.

**ಮಣಿಪುರದಲ್ಲಿ ಪೊಲೀಸರ ಮೇಲೆ ಗುಂಡು, ಇಬ್ಬರಿಗೆ ಗಾಯ**
ಇಂಫಾಲ್ : ಮಣಿಪುರದ ಕಾಂಗ್‌ಚುಪ್ ಎಂಬಲ್ಲಿ ಗುರುತಿಸಲಾಗದ ವ್ಯಕ್ತಿಗಳು ಪೊಲೀಸರು ಹಾಗೂ ನಾಗರಿಕರ ಮೇಲೆ ಗುಂಡು ಹಾರಿಸಿದ್ದಾರೆ. ಇದರಿಂದಾಗಿ ಇಬ್ಬರು ಪೊಲೀಸರು ಹಾಗೂ ಓರ್ವ ಮಹಿಳೆ ಸೇರಿದಂತೆ ಒಂಭತ್ತು ಜನರಿಗೆ ಗಾಯಗಳಾಗಿವೆ.

**ಬೇರಿಯಂ ಇರುವ ಪಟಾಕಿಗಳ ನಿಷೇಧ**
ನವದೆಹಲಿ : ಬೇರಿಯಂ ಬೈಂಡ್ಸ್ ಇರುವ ಪಟಾಕಿಗಳನ್ನು ನಿಷೇಧಿಸಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ. ಈ ಆದೇಶ ದೇಶಾದ್ಯಂತ ಅನ್ವಯವಾಗಲಿದೆ ಎಂದು ತಿಳಿಸಲಾಗಿದೆ.

**ವಿವರ್ಕ್ ಕಂಪನಿ ದಿವಾಳಿ**
ವಾಷಿಂಗ್ಟನ್ : ಅಮೆರಿಕದ ವಿವರ್ಕ್ ಕಂಪನಿಯು ದಿವಾಳಿಗಾಗಿ ಅರ್ಜಿ ದಾಖಲಿಸಿದೆ. ಕಂಪನಿಗಳ ಕಾರ್ಯನಿರ್ವಹಣೆಗಾಗಿ ಸ್ಥಳವನ್ನು ಒದಗಿಸುವುದು ವಿವರ್ಕ್‌ನ ಪ್ರಮುಖ ವಹಿವಾಟಾಗಿತ್ತು. ಆದರೆ, ಅಮೆರಿಕದ ವಿವರ್ಕ್ ದಿವಾಳಿಯಾಗಿರುವುದರಿಂದ ಅದರ ಭಾರತೀಯ ವಿಭಾಗವಾದ ವೀವರ್ಕ್ ಇಂಡಿಯಾ ಮೇಲೆ ಪರಿಣಾಮವಾಗುವುದಿಲ್ಲ ಎಂದು ಕಂಪನಿ ಹೇಳಿದೆ.

**ಪಾಕ್‌ಗೆ ಚೀನಾದ ಸಾಲ ಉದಾರ ಸ್ವರೂಪದ್ದಲ್ಲ**
ಕರಾಚಿ : ಪಾಕಿಸ್ತಾನಕ್ಕೆ ಚೀನಾ ನೀಡಿರುವ ಸಾಲದ ಶೇ.98ರಷ್ಟು ಭಾಗ 'ಉದಾರ' ಸ್ವರೂಪದ್ದಲ್ಲ. 2000ದಿಂದ 2021ರ ನಡುವೆ ನೀಡಲಾದ ಸಾಲದಲ್ಲಿ ಶೇ.2ರಷ್ಟು ಮಾತ್ರ ಅನುದಾನದ ರೂಪದಲ್ಲಿ ಬಂದಿದೆ ಎಂದು ಇತ್ತೀಚಿನ ವರದಿ ತಿಳಿಸಿದೆ.

**ಜೈಲಿನಿಂದಲೇ ಕೇಜ್ರಿವಾಲ್ ಸರ್ಕಾರ : ಜನಮತಗಣನೆಗೆ ಎಎಪಿ ನಿರ್ಧಾರ**
ನವದೆಹಲಿ : ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬಂಧನಕ್ಕೊಳಗಾದರೂ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕೇ ಎಂಬ ಬಗ್ಗೆ ದೇಶಾದ್ಯಂತ ಜನಮತಗಣನೆ ಮಾಡುವುದಾಗಿ ಆಮ್ ಆದ್ಮಿ ಪಾರ್ಟಿ ತಿಳಿಸಿದೆ. ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್‌ಗೆ ಜಾರಿ ನಿರ್ದೇಶನಾಲಯ ಸಮನ್ಸ್ ಕಳಿಸಿದೆ.

# ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

### ಜನಸಂಖ್ಯೆಯ ಶೇ 76.60 ರಷ್ಟು ಮತದಾರರು, ಯುವ ಮತದಾರರನ್ನು ಹೆಚ್ಚು ನೋಂದಾಯಿಸಲು ಮತದಾರರ ಪಟ್ಟಿ ವೀಕ್ಷಕರಾದ ಗುಂಜನ್ ಕೃಷ್ಣ ಸೂಚನೆ



ದಾವಣಗೆರೆ, ನ. 6 - ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಭಾವಚಿತ್ರವಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ನಡೆಯುತ್ತಿದ್ದು ಮತದಾರರ ಪಟ್ಟಿಗೆ ಯುವ ಮತದಾರರನ್ನು ಹೆಚ್ಚು ನೋಂದಾಯಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಮತದಾರರ ಪಟ್ಟಿ ವೀಕ್ಷಕ ಗುಂಜನ್ ಕೃಷ್ಣ ತಿಳಿಸಿದರು.

ಅವರು ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ತಿಳಿಸಿದರು. ಕರಡು ಮತದಾರರ ಪಟ್ಟಿಯನ್ನು ಅ. 27 ರಂದು ಪ್ರಕಟಿಸಲಾಗಿದ್ದು ಆಕ್ಷೇಪಣೆ ಸಲ್ಲಿಸಲು ಡಿ. 9 ರ ವರೆಗೆ ಅವಕಾಶ ಕಲ್ಪಿಸಲಾಗಿದೆ ಮತ್ತು ಅಂತಿಮ ಮತದಾರರ ಪಟ್ಟಿಯನ್ನು 2024 ರ ಜ. 5 ರಂದು ಪ್ರಕಟಿಸಲಾಗುತ್ತದೆ.

ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 2024 ಕ್ಕೆ ಜಿಲ್ಲೆಯಲ್ಲಿ 947205 ಗಂಡು, 951359 ಹೆಣ್ಣು ಸೇರಿ 1898000 ಜನಸಂಖ್ಯೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಜನಸಂಖ್ಯೆಗನುಗುಣವಾಗಿ ಶೇ 76.60 ರಷ್ಟು ಮತದಾರರಿದ್ದಾರೆ. ಕರಡು ಮತದಾರರ ಪಟ್ಟಿಯನ್ವಯ 726931 ಪುರುಷ, 726887 ಮಹಿಳೆ ಸೇರಿ ಒಟ್ಟು 1453818 ಮತದಾರರಿದ್ದಾರೆ.

**ಯುವ ಮತದಾರರು :** ಕರಡು ಪಟ್ಟಿಯನ್ವಯ ಯುವ ಮತದಾರರ ವಿವರದನ್ವಯ 18-19 ವರ್ಷದ 10493 ಪುರುಷ, 8815 ಮಹಿಳೆ, ಇತರೆ 2 ಸೇರಿ 19310 ಯುವ ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರು ವಿವರ ನೀಡಿದರು. ಈ ವೇಳೆ ಮತದಾರರಲ್ಲಿ ಜಾಗೃತಿ ಮೂಡಿಸುವ ಮೂಲಕ ಯುವ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಮತದಾರರ ಪಟ್ಟಿಯಲ್ಲಿ ನೋಂದಾಯಿಸಲು ವೀಕ್ಷಕರಾದ ಗುಂಜನ್ ಕೃಷ್ಣ ತಿಳಿಸಿದರು.

**ಮತಗಟ್ಟೆ ಮಟ್ಟದ ಏಜೆಂಟ್ ನೇಮಿಸಿ :** ಎಲ್ಲಾ ಪಕ್ಷದವರು ಮತಗಟ್ಟೆ ಮಟ್ಟದ ಏಜೆಂಟ್‌ಗಳನ್ನು ನೇಮಕ ಮಾಡಿ ಪಟ್ಟಿ ನೀಡಬೇಕು ಎಂದು ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಪಕ್ಷಗಳ ಮುಖಂಡರಿಗೆ ತಿಳಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಉಪಸ್ಥಿತರಿದ್ದರು.

# ದೇವರಬೆಳಕೆರೆ ಶಾಲೆಯ ಸೌಲಭ್ಯಗಳ ಬಳಕೆಗೆ ಚಾಲನೆ



ಹರಿಹರ, ನ. 7 - ತಾಲ್ಲೂಕಿನ ದೇವರಬೆಳಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೆಂಗಳೂರಿನ ಇಂಡಿಯಾ ಸುಧಾರ್ ಚಾರಿಟೇಬಲ್ ಟ್ರಸ್ಟ್ ಹಾಗೂ ಸಿನ್ಪಾಸಿಸ್ ಇಂಡಿಯಾ ಪ್ರೈ. ಲಿ ಸೇವಾ ಸಂಸ್ಥೆಗಳು ಶಾಲಾ ನಲಿ-ಕಲಿ ಮಕ್ಕಳಿಗೆ ನೀಡಲಾದ ಸೌಲಭ್ಯಗಳ ಹಾಗೂ ಹೊರಾಂಗಣ ಮೈದಾನದಲ್ಲಿ ನಿರ್ಮಿಸಲಾದ ಕ್ರೀಡಾ ಸೌಲಭ್ಯಗಳನ್ನು ಬಳಕೆಗಾಗಿ ಉದ್ಘಾಟಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಮಾತನಾಡಿ, ಈ ಎರಡೂ ಸಂಸ್ಥೆಗಳ ಕಾರ್ಯ ಮೆಚ್ಚಿ ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಸಲ್ಲಿಸಿರುವ ಇಂತಹ ಕಾರ್ಯಗಳು ಅನುಕರಣೀಯ. ನೀಡಿರುವ ಸೌಲಭ್ಯಗಳನ್ನು ಚೆನ್ನಾಗಿ ಮಕ್ಕಳು ಬಳಸಿಕೊಂಡು ಉತ್ತಮ ವಿದ್ಯಾರ್ಥಿಗಳಾಗಿ ಬೆಳೆಯಲು ಕರೆ ನೀಡಿದರು.

ಪ್ರಭಾರಿ ತಾ.ಪಂ. ಸಿಇಓ ರಾಮಕೃಷ್ಣಪ್ಪ ಮಾತನಾಡಿ, ನಮ್ಮ ತಾಲ್ಲೂಕಿನಲ್ಲಿ 730 ಕುರ್ಚಿಗಳು, 90 ಟೇಬಲ್‌ಗಳು ಹಾಗೂ 4 ಶಾಲೆಗಳಿಗೆ ಹೊರಾಂಗಣ ಆಟದ ಸಾಮಗ್ರಿಗಳನ್ನು ಒದಗಿಸಲಾಗಿರುವ ಈ ಸಂಸ್ಥೆಗಳ ಕಾರ್ಯ ಮೆಚ್ಚುವಂತಹದ್ದು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಶಾಲೆಗಳನ್ನು ಆಯ್ಕೆ ಮಾಡಿ, ಸೌಲಭ್ಯ ನೀಡುವಂತೆ ಕೋರಿದರು.

ಮುಖ್ಯ ಅತಿಥಿಗಳಾಗಿ ಇಂಡಿಯಾ ಸುಧಾರ್ ಟ್ರಸ್ಟ್‌ನ ಮುಖ್ಯಸ್ಥ ವಿನೋದ್ ಮುರುಗೋಡ್, ಸಿನ್ಪಾಸಿಸ್ ಕಂಪನಿ ಪ್ರಾಜೆಕ್ಟ್ ಮ್ಯಾನೇಜರ್ ಶ್ರೀಮತಿ ಸಬೀತಾ ಮಹೇಶ್, ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಸೀತಮ್ಮ ತಿಪ್ಪೇಶ್, ಎಸ್‌ಡಿಎಂಸಿಯ ಎಲ್ಲಾ ಪದಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶ್ರೀಮತಿ ಮಂಜುಳಾ ಅವರುಗಳು ಉಪಸ್ಥಿತರಿದ್ದರು.

ಇದೇ ವೇಳೆಯಲ್ಲಿ ಮುಖ್ಯ ಶಿಕ್ಷಕ ಆರ್. ಆರ್.ಮಠ ಅವರನ್ನು ಗೌರವಿಸಲಾಯಿತು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ. ಎಂ.ಮಂಜುನಾಥಯ್ಯ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀಮತಿ ಲತಾ ಕೊಟ್ರೇಶ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆ, ಬೀರಪ್ಪ, ಶಾಲಾ ಪ್ರಭಾರಿ ಮುಖ್ಯ ಶಿಕ್ಷ ಬಿದರಿ ಮಂಜುನಾಥ್ ಹಾಜರಿದ್ದರು.

ಶಿಕ್ಷಕ ಶಂಕ್ರಪ್ಪ ಪ್ರಾರ್ಥಿಸಿದರು. ಟಿ.ಎಸ್. ಕುಮಾರಸ್ವಾಮಿ ಸ್ವಾಗತಿಸಿದರು. ಶಿಕ್ಷಕ ಆರ್. ಬಿ.ಮಲ್ಲಿಕಾರ್ಜುನ್ ನಿರೂಪಿಸಿದರು.

# ನಗರದಲ್ಲಿ ನಾಳೆ ಕಾನೂನು ಅರಿವು ಸಾಕ್ಷರತಾ ಜಾಥಾ

ದಾವಣಗೆರೆ, ನ. 7 - ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ ಅಂಗವಾಗಿ ನಾಡಿದ್ದು ದಿನಾಂಕ 9ರಂದು ಕಾನೂನು ಅರಿವು ಸಾಕ್ಷರತಾ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ ಹೇಳಿದರು.

'ಪ್ಲಾಸ್ಟಿಕ್ ಮುಕ್ತ ಪರಿಸರ, ಪೋಕ್ಸೋ ಕಾನೂನು ಅರಿವು, ಬಾಲ್ಯ ವಿವಾಹ ನಿಷೇಧ ಕಾನೂನು ಅರಿವು, ಬಾಲ ಕಾರ್ಮಿಕ ಪದ್ಧತಿ ವಿರೋಧ ಹಾಗೂ ರಾಷ್ಟ್ರೀಯ ಸಂಚಾರಿ ನಿಯಮ ಉಲ್ಲಂಘನೆ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಜಾಥಾ ಹಮ್ಮಿಕೊಳ್ಳಲಾಗಿದೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಅಂದು ಬೆಳಿಗ್ಗೆ 9ಕ್ಕೆ ನಗರದ ಹೈಸ್ಕೂಲ್ ಮೈದಾನದಿಂದ ಜಾಥಾ ಆರಂಭ ವಾಗಲಿದ್ದು, ವಿದ್ಯಾರ್ಥಿಗಳನ್ನು 4 ತಂಡಗಳಾಗಿ ವಿಂಗಡಣೆ ಮಾಡಲಾಗುವುದು. 800ರಿಂದ 1000 ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಜಿಲ್ಲಾ ಪಂಚಾಯಿತಿ ಸಿಇಒ ಸುರೇಶ್.ಬಿ ಇಟ್ನಾಳ್, ಎಸ್ಪಿ ಉಮಾ ಪ್ರಶಾಂತ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್, ಆರ್.ಎಲ್ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಯತೀಶ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿ ಡಾ.ಎಚ್.ಲಕ್ಷ್ಮೀಕಾಂತ್ ಇತರರು ಪಾಲ್ಗೊಳ್ಳುವರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್, ಆರ್.ಎಲ್ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಯತೀಶ್, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ ಗೋಪಾನಾಳ್, ಕಾರ್ಯದರ್ಶಿ ಬಸವರಾಜ್.ಎಸ್, ಮಂಜುನಾಥ್, ಲಿಂಗರಾಜ್, ರಮೇಶ್, ವಿದ್ಯಾಧರ್ ಹಾಗು ಇತರರು ಇದ್ದರು.

## ನಗರದಲ್ಲಿ ಇಂದು ಭಟ್ಟರ ವಿರುದ್ಧ ಪ್ರತಿಭಟನೆ

ಸಾಣೇಹಳ್ಳಿ ಪೀಠಾಧಿಪತಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬಸವ ತತ್ವ ಅನುಯಾಯಿಗಳಿಗೆ ಗಣೇಶ ಮೂರ್ತಿಯಾದಿಯಾಗಿ ಮೂರ್ತಿ ಪೂಜೆಗಳನ್ನು ಮಾಡಬಾರದು ಎಂದು ನೀಡಿರುವ ಹೇಳಿಕೆಯನ್ನು ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಅವರು, ಶ್ರೀಗಳ ಹೇಳಿಕೆಯನ್ನು ತಿರುಚಿ, ಶ್ರೀಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ದೂರಿ, ಬಸವ ಪರ ಸಂಘಟನೆಗಳಿಂದ ಭಟ್ಟರ ವಿರುದ್ಧ ಇಂದು ಬೆಳಿಗ್ಗೆ 11 ಗಂಟೆಗೆ ಜಯದೇವ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಹೆಚ್. ಶಶಿಧರ್ ತಿಳಿಸಿದ್ದಾರೆ.

## ರಾಜ್ಯ ಸರ್ಕಾರದ ನಿರ್ಧಾರದಿಂದ ರೈತರಿಗೆ ಹೊರೆ: ಆಮ್ ಆದ್ಮಿ

ದಾವಣಗೆರೆ, ನ.7- ರಾಜ್ಯ ಸರ್ಕಾರ ಕೃಷಿ ಪಂಪ್‌ಸೆಟ್‌ಗಳಿಗೆ ಟ್ರಾನ್ಸ್‌ಫಾರ್ಮರ್ ಸಹಿತ ಉಚಿತ ಮೂಲ ಸೌಕರ್ಯ ಯೋಜನೆ ಮುಂದುವರೆಸುವಂತೆ ಹಾಗೂ ಕೇಂದ್ರ ಸರ್ಕಾರವು ಸೋಲಾರ್ ಪಂಪ್‌ಸೆಟ್‌ಗಳಿಗೆ ನೀಡುವ ಸಬ್ಸಿಡಿ ಹೆಚ್ಚಿಸುವಂತೆ ಜಿಲ್ಲಾ ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಸ್. ಶಿವಕುಮಾರಪ್ಪ, ರೈತರ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರೈತರ ಹಿತಾಸಕ್ತಿ ಕಾಪಾಡುವ ಕಾನೂನು ಜಾರಿಗೆ ತರದೇ ರೈತರನ್ನು ಮತ್ತಷ್ಟು ಸಾಲದ ಸುಳಿಗೆ ಸಿಲುಕಿಸುವ ಕಾಯ್ದೆಗಳನ್ನಾಗಿ ಪರಿವರ್ತಿಸಿವೆ ಎಂದು ಆರೋಪಿಸಿದರು.

ರಾಜ್ಯ ಸರ್ಕರವು ಸೆ.22ರ ನಂತರ ರೈತರು ತಮ್ಮ ಸ್ವಂತ ಹಣದಲ್ಲಿಯೇ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕಂಬ ಪಡೆದುಕೊಳ್ಳುವಂತೆ ಆದೇಶಿಸಿದ್ದು, ಇದರಿಂದ ಪ್ರತಿ ರೈತರಿಗೆ 2.50 ಲಕ್ಷ ರೂ. ಖರ್ಚಾಗುತ್ತದೆ. ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತಾರೆ. ಸರ್ಕಾರ ಕೂಡಲೇ ಈ ನಿರ್ಧಾರ ಕೈ ಬಿಡಬೇಕು ಎಂದು ಹೇಳಿದರು. ಸರ್ಕಾರ ರೈತರಿಗೆ ಅತಿ ಕಡಿಮೆ ದರದಲ್ಲಿ ಟ್ರಾನ್ಸ್ ಫಾರ್ಮರ್ ಹಾಗೂ ವಿದ್ಯುತ್ ಕಂಬಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅರುಣಕುಮಾರ್ ಸಿ.ಆರ್., ಆದಿಲ್ ಖಾನ್, ರವೀಂದ್ರ, ಸುರೇಶ್ ಸಿಡ್ಲಪ್ಪ, ಧರ್ಮನಾಯ್ಕ ಇತರರಿದ್ದರು.

# ವಿನೋಬನಗರದಲ್ಲಿ ಆರೋಗ್ಯ ಶಿಬಿರ



ದಾವಣಗೆರೆ, ನ. 7 - ಎಸ್.ಎಸ್ ಕೇರ್ ಟ್ರಸ್ಟ್, ಬಾಪೂಜಿ ಆಸ್ಪತ್ರೆ, ಶ್ರೀ ಶುಭಲಕ್ಷ್ಮಿ ಮಹಿಳಾ ಮಂಡಳಿ ಹಾಗೂ 17ನೇ ವಾರ್ಡಿನ ಪಕ್ಷದ ಕಾರ್ಯಕರ್ತರ ಸಹಭಾಗಿತ್ವದಲ್ಲಿ ವಿನೋಬನಗರದ ಶ್ರೀ ಶಂಭುಲಿಂಗೇಶ್ವರ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಶಿಬಿರದ ಉದ್ಘಾಟನೆ ಮಾಡಿ ಮಾತನಾಡಿದ ಎಸ್.ಎಸ್ ಕೇರ್ ಟ್ರಸ್ಟ್ ಲೈಫ್ ಟ್ರಸ್ಟಿಯಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಪ್ರತಿಯೊಬ್ಬರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು, ಯಾವುದೇ ಕಾಯಿಲೆಗಳಿಗೆ ಪ್ರಾಥಮಿಕ ಹಂತದಲ್ಲಿಯೇ ಚಿಕಿತ್ಸೆ ಪಡೆದರೇ ಮುಂದೆ ಆಗಬಹುದಾದ ದೊಡ್ಡ ಅನಾಹುತಗಳನ್ನು ತಪ್ಪಿಸಬಹುದು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಲತಿಕಾ ದಿನೇಶ್ ಕೆ. ಶೆಟ್ಟಿ, ಪೊಲೀಸ್ ವೃತ್ತ ನಿರೀಕ್ಷಕರಾದ ಎಂ.ಆರ್ ಚೌಬೆ, ಪದ್ಮಜ ರಾವ್, ವಸಂತ ಬಾಯಿ, ಸರಳ, ಅಂಬಿಕ ಬಾಯಿ ದೀಪ, ಮಧು ಪವಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಬಿ.ಎಸ್ ಚನ್ನಬಸಪ್ಪ ಅಂಡ್ ಸನ್ಸ್‌ನಲ್ಲಿ ರಾಜ್ಯೋತ್ಸವ



ದಾವಣಗೆರೆ, ನ.7- ನಗರದ ಹೆಸರಾಂತ ಬಿ.ಎಸ್ ಚನ್ನಬಸಪ್ಪ ಅಂಡ್ ಸನ್ಸ್ ಇವರ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವವನ್ನು ಅಂಗಡಿಯ ಮುಂಭಾಗದಲ್ಲಿ ಆಚರಿಸಲಾಯಿತು.

ಅಂಗಡಿಯ ಮಾಲೀಕರಾದ ಬಿ.ಸಿ ವಿವೇಕ್ ಮತ್ತು ಬಿ.ಎಸ್. ಮೃನಾಲ್ ಧ್ವಜಾರೋಹಣ ನಡೆಸಿ, ಸಿಹಿ ಹಂಚಿ ಆಟೋ ಚಾಲಕರ, ಚಲನಚಿತ್ರ ನಟರ ಭಾವಚಿತ್ರಗಳನ್ನು ನೀಡಿದರು.

ಕನ್ನಡ ರಾಜ್ಯೋತ್ಸವ ಬರೀ ತಿಂಗಳಿಗೆ ಮಾತ್ರ ಸೀಮಿತವಾಗಬಾರದು, ಪ್ರತಿದಿನ ನಾವು ಕನ್ನಡವನ್ನು ಬಳಸಿ, ಕನ್ನಡವನ್ನು ಬೆಳೆಸುವ ಕೆಲಸವನ್ನು ಮಾಡಬೇಕು ಎಂದು ಹೇಳಿದರು.

ಅಂಗಡಿಯ ಒಳಭಾಗದಲ್ಲಿ ವಿಶೇಷವಾಗಿ ನಮ್ಮ ಕನ್ನಡ ಧ್ವಜದ ಬಣ್ಣಗಳ ಅಲಂಕಾರವನ್ನು ಏರ್ಪಡಿಸಲಾಗಿತ್ತು. ಪ್ರತಿಯೊಬ್ಬ ಪ್ರಜೆಯೂ ಕನ್ನಡ ರಾಜ್ಯೋತ್ಸವವನ್ನು ಆಚರಿಸಬೇಕು, ಆಗ ಮಾತ್ರ ನಮ್ಮ ದೇಶ, ಭಾಷೆ, ನೆಲ, ಜಲ ಎಲ್ಲವೂ ಸಮಾನವಾಗಿ ಬೆಳೆಯಲು ಸಾಧ್ಯ ಎಂದು ತಿಳಿಸಿದರು. ಅಂಗಡಿಯ ಮೇನೇಜರ್ ಉಮೇಶ್ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.


# ಶಶಿಕಲಾ ಅವರಿಗೆ ಮಹಾತ್ಮ ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ



ದಾವಣಗೆರೆ, ನ. 7 - ಬೆಂಗಳೂರಿನಲ್ಲಿ ಮೊನ್ನೆ ನಡೆದ ಸಮಾರಂಭದಲ್ಲಿ ಸ್ಥಳೀಯ ಮಹಿಳಾ ಉದ್ಯಮಿ, ಲಲಿತಾ ವಿದ್ಯಾಸಂಸ್ಥೆಯ ನಿರ್ಮಾತೃ ಶ್ರೀಮತಿ ಶಶಿಕಲಾ ಇ.ಆರ್ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು '2023ನೇ ಮಹಾತ್ಮ ಗಾಂಧಿ ಸದ್ಭಾವನಾ ಅಂತರರಾಷ್ಟ್ರೀಯ ಪ್ರಶಸ್ತಿ' ಯನ್ನು ಪ್ರದಾನ ಮಾಡಿದರು.

# ಹರಿಹರ : ದೊಡ್ಡಿ ಬೀದಿಯ ಬಡಾವಣೆಯಲ್ಲಿ ಕಟ್ಟಿಕೊಂಡ ಚರಂಡಿ

ಹರಿಹರ, ನ, 7- ನಗರದಲ್ಲಿ ನಿನ್ನೆ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ದೊಡ್ಡಿ ಬೀದಿಯ ಬಡಾವಣೆಯಲ್ಲಿ ಚರಂಡಿ ಕಟ್ಟಿಕೊಂಡು ದೊಡ್ಡಿ ಬೀದಿ ಮತ್ತು ತೆಗ್ಗಿನಕೇರಿ ಬಡಾವಣೆಯ ನಿವಾಸಿಗಳ ಮನೆಗಳಿಗೆ ಮಳೆಯ ನೀರು ನುಗ್ಗಿದ ಪರಿಣಾಮ, ಮನೆಯಲ್ಲಿ ಇದ್ದಂತಹ ನೀರನ್ನು ಹೊರಗಡೆ ಸಾಗಿಸಲು ನಿವಾಸಿಗಳು ಹರಸಾಹಸ ಪಡಬೇಕಾಯಿತು.



ಇಂದು ನಗರಸಭೆಯ ಸಿಬ್ಬಂದಿಗಳು ಜೆಸಿಬಿ ಯಂತ್ರದ ಮೂಲಕ ಚರಂಡಿಯಲ್ಲಿ ಕಟ್ಟಿಕೊಂಡಿದ್ದ ಕಸವನ್ನು ತೆಗೆದು ಚರಂಡಿ ದುರಸ್ತಿ ಪಡಿಸಿದರು.

# ಹಳೇ ವಿದ್ಯಾರ್ಥಿಗಳಿಗೆ ಬುಕ್, ಪೆನ್ನು ವಿತರಣೆ, ಶಿಕ್ಷಕರಿಗೆ ಸನ್ಮಾನ



**ಹರಪನಹಳ್ಳಿ**

ಹರಪನಹಳ್ಳಿ, ನ. 7- ಶತಮಾನ ಪೂರೈಸಿದ ಪಟ್ಟಣದ ಮೇಗಳಪೇಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2001-2002ನೇ ಸಾಲಿನ ಹಳೆಯ ವಿದ್ಯಾರ್ಥಿಗಳಿಂದ ಮಕ್ಕಳಿಗೆ ನೋಟ್ ಬುಕ್, ಪೆನ್ನ್ ವಿತರಣೆ ಮಾಡಿ ಕಲಿಸಿದ ಶಿಕ್ಷಕರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಈ ಶಾಲೆಯಲ್ಲಿ ಓದಿದ ನೆನಪಿನಾರ್ಥವಾಗಿ ಪ್ರತಿ ವರ್ಷ ನಮ್ಮ ಬ್ಯಾಚ್ ವಿದ್ಯಾರ್ಥಿಗಳಿಂದ ಮಕ್ಕಳ ಕಲಿಕೆಗೆ ಸಹಾಯಕವಾಗಲು 5, 6, 7 ಹಾಗೂ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್ ಹಾಗೂ ಪೆನ್ನ್ ವಿತರಿಸುತ್ತೇವೆ ಎಂದು ಹಳೆಯ ವಿದ್ಯಾರ್ಥಿಗಳು ತಿಳಿಸಿದರು.

ಶಿಕ್ಷಕರಿಗೆ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿತ್ತು. ಎಸ್‌ಡಿಎಂಸಿ ಅಧ್ಯಕ್ಷರಾದ ರೇಖಾ, ಶತಮಾನೋತ್ಸವ ಸಮಿತಿ ಅಧ್ಯಕ್ಷ ಪಾರಸ್‌ಮಲ್ ಜೈನ್, ಮುಖ್ಯ ಶಿಕ್ಷಕ ಅಂಜಿನಪ್ಪ, ಎಂ.ಎಂ. ಚಂದ್ರಶೇಖರಯ್ಯ, ನೀಲಗುಂದ ಕೊಟ್ರೇಶ್, ಮಂಜುನಾಥ ಆಚಾರ್, ಪರಮೇಶ್ವರನಾಯ್ಕ, ವೀರಭದ್ರಯ್ಯ, ಸಿದ್ದಮ್ಮ, ಶಾರದ, ಶಕುಂತಲಮ್ಮ, ವಿನೋದಮ್ಮ, ಎನ್.ಜಿ. ಚಿದಾನಂದಪ್ಪ, ಸಲೀಂ ಹೆಚ್, ಶಿವಯೋಗಿ, ಎ.ಎಸ್. ಗುಡುಗೂರು, ಹೆಚ್.ಶೈಲಾ, ಎಂ. ರತ್ನಮ್ಮ, ಪಿ. ನಾಗರತ್ನ, ಮಂಜಪ್ಪ ಬಣಕಾರ್ ಸೇರಿದಂತೆ 2001-2002ನೇ ಸಾಲಿನ ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವಿವಿಧ ಪ್ರಶಸ್ತಿಗಳಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ನ.7- ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ, ಅರ್ಜುನ ಪ್ರಶಸ್ತಿ, ದ್ರೋಣಾಚಾರ್ಯ ಪ್ರಶಸ್ತಿ, ಧ್ಯಾನ್‌ಚಂದ್ ಪ್ರಶಸ್ತಿ, ರಾಷ್ಟ್ರೀಯ ಖೇಲ್ ರತ್ನ ಪುರಸ್ಕಾರ ಮತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹರಾಗಿರುವ ಕ್ರೀಡಾಪಟುಗಳು, ತರಬೇತುದಾರರು ಮತ್ತು ಘಟಕಗಳು ಅಧಿಕಾರಿಗಳ ಶಿಫಾರಸ್ಸುಗಳಿಲ್ಲದೆ ಸ್ವಯಂ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದು. ಅರ್ಜಿಯನ್ನು ಆನ್‌ಲೈನ್ dbtyas-sports.gov.in ಮುಖಾಂತರ ಇದೇ ದಿನಾಂಕ 10 ರೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 011-23387432 ಅಥವಾ ಟೋಲ್ ಫ್ರೀ ಸಹಾಯವಾಣಿ ಸಂಖ್ಯೆಗಳು : 1800-202-5155 ಮತ್ತು 1800-258-5155 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

### ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ಜಿಲ್ಲಾಧಿಕಾರಿಗಳವರ ಕಛೇರಿ, ದಾವಣಗೆರೆ

**ಭೂಮಿ ಅಪೀಲು ನಂ: 288 /2023-24**

**ಅಪೀಲುದಾರರು :** ಶ್ರೀ ಜಿ. ಗುರುಲಿಂಗಪ್ಪ **- ವಿರುದ್ಧ -**
**ಎದುರುದಾರರು :** ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ತಾ||, ದಾವಣಗೆರೆ. & ಇತರರು.
**ಎದುರುದಾರರು :** 5) ಶ್ರೀ ಸತೀಶ್ ಜಿ.ಬಿ. ಬಿನ್' ವಾಮದೇವಪ್ಪ, ವಯಸ್ಸು ಸುಮಾರು 40 ವರ್ಷ.
6) (ಎ) ಶ್ರೀ ಬಸವರಾಜಪ್ಪ ಬಿನ್ ಕುರ್ಕಿ ಸಿದ್ಧಬಸಪ್ಪ ವಯಸ್ಸು ಸುಮಾರು 60 ವರ್ಷ
7) ಶ್ರೀ ಕೆ.ಬಿ.ಶಿವಕುಮಾರ್ ಬಿನ್ ಬಸಪ್ಪ. ಕೆ., ವಯಸ್ಸು ಸುಮಾರು 40 ವರ್ಷ, ಮೇಲ್ಕಂಡ ಎಲ್ಲರ ವಾಸ: ಆಲೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ಅಪೀಲುದಾರರು ಎದುರುದಾರರ ವಿರುದ್ಧ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರಿ.ಸ.ನಂ.184 ಜಮೀನಿಗೆ ಸಂಬಂಧಪಟ್ಟಂತೆ 1ನೇ ಎದುರುದಾರರು ಈ ಹಿಂದೆ ಮಾಡಿದ ಷೋಡು ದುರಸ್ತುಗಳನ್ನು ರದ್ದುಪಡಿಸಲು ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು, ಮೇಲ್ಕಂಡ ಎದುರುದಾರರಿಗೆ ನ್ಯಾಯಾಲಯದಿಂದ ಹೊರಡಿಸಲಾಗಿರುವ ಸಮನ್ಸ್/ನೋಟೀಸ್ ಹಾಗೂ ಅಂಚೆ ನೋಟೀಸ್ ಇತ್ಯಾದಿಗಳನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೇ ಹಿಂದಿರುಗಿಸಿರುವ ಪ್ರಯುಕ್ತ ತಮಗೆ ಸಾರ್ವಜನಿಕ ನೋಟೀಸನ್ನು ಈ ಮೂಲಕ ಹೊರಡಿಸುತ್ತಿದ್ದು, ದಿನಾಂಕ: 9.11.2023 ರಂದು ಮಧ್ಯಾಹ್ನ 3.00 ಗಂಟೆಯ ಸಮಯದಂದು ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ನ್ಯಾಯಾಲಯವು ಮುಂದಿನ ಆದೇಶ ಹೊರಡಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 2.11.2023 ರಂದು ಹೊರಡಿಸಲ್ಪಟ್ಟಿದೆ.

**ಸಹಿ/- ಅಪೀಲುದಾರರ ಪರ ವಕೀಲರು**
**(ಎಂ.ಎಸ್. ರಾಜಕುಮಾರ್)**
**ಸ್ಥಳ : ದಾವಣಗೆರೆ.**
**ದಿನಾಂಕ : 2.11.2023**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಉಪನಿರ್ದೇಶಕರವರು**
**ಭೂ ದಾಖಲೆಗಳ ಉಪನಿರ್ದೇಶಕರವರ**
**ನ್ಯಾಯಾಲಯ, ದಾವಣಗೆರೆ,**

### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ವಿ.ಕೆ. ಸುನೀಲ್ ಬಿನ್ ವಿ.ಪಿ. ಕೃಷ್ಣಮೂರ್ತಿ** (ಮೊ. ನಂ.9663373586) ವಾಸ: 'ಶ್ರೀ ವೆಂಕಟೇಶ್ವರ ನಿಲಯ', #2595/14, 3ನೇ ಮುಖ್ಯರಸ್ತೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತು ಹಾಲಿ ದಾವಣಗೆರೆ ತಾಲ್ಲೂಕು, ಯರವ್ವನಾಗ್ತಿಹಳ್ಳಿ ಕ್ಯಾಂಪ್ ವಾಸಿಯಾದ ಶ್ರೀ ಬಿ. ವೆಂಕಟೇಶ್ ಬಿನ್ ಲಕ್ಷ್ಮೀನಾರಾಯಣ ಇವರು ದಿನಾಂಕ 19.03.2009 ರಂದು ಎಸ್.ಆರ್. ನಂ.12318/2008-09 ರಂತೆ ಶುದ್ಧ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಕಾನೂನುಬದ್ಧ ಮಾಲೀಕರಾಗಿರುತ್ತಾರೆ. ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶ್ರೀ ಬಿ. ವೆಂಕಟೇಶ್ ಬಿನ್ ಲಕ್ಷ್ಮೀನಾರಾಯಣ ಮತ್ತು ಇವರ ಧರ್ಮಪತ್ನಿ ಮತ್ತು ಮಕ್ಕಳಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಬೇರೆ ಯಾರೇ ವಾರಸುದಾರರಾಗಲೀ ಅಥವಾ ಬೇರೆ ಯಾವುದೇ ವ್ಯಕ್ತಿಯ ತಂಟೆ, ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆಗೆ, ಕ್ರಯದ ಕರಾರಿಗೆ ಒಳಪಟ್ಟಿದ್ದಲ್ಲಿ ಹಾಗೂ ಯಾವುದೇ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳೊಂದಿಗೆ ವ್ಯವಹರಿಸಿದ್ದಲ್ಲಿ ಅಥವಾ ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ಏಳು ದಿನಗಳ ಒಳಗಾಗಿ ನನ್ನ ಕಕ್ಷಿದಾರರಾಗಲೀ ಅಥವಾ ಕೆಳಕಂಡ ಅವರ ವಕೀಲರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಒಂದು ವೇಳೆ ಏಳು ದಿನಗಳ ಒಳಗಾಗಿ ಯಾವುದೇ ರೀತಿಯ ತಂಟೆ, ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳು ಬೇರೆ ಯಾವುದೇ ವ್ಯಕ್ತಿಗಳ ಹಕ್ಕು, ಹಿತಾಸಕ್ತಿ ಒಳಪಟ್ಟಿರುವುದಿಲ್ಲ ಎಂದು ಪರಿಗಣಿಸಿ, ತಮ್ಮ ಹೆಸರಿನಲ್ಲಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಆನಂತರ ಬಂದ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು, ಗೋಪನಾಳು ಗ್ರಾಮ ಪಂಚಾಯತಿ ವ್ಯಾಪ್ತಿಯ ಯರವ್ವನಾಗ್ತಿಹಳ್ಳಿ ಕ್ಯಾಂಪ್‌ನಲ್ಲಿ ಬರುವ ಸೈಟ್ ನಂ.12, ಆಸ್ತಿ/ಡೋರ್ ನಂ.12, ಇ-ಸ್ವತ್ತು ನಂ.151200204000120084 ವಿಸ್ತೀರ್ಣ 35.052 x 18.288 ಮೀಟರ್‌ವುಳ್ಳ ಹಳೆಯ ಹಂಚಿನ ಮನೆ ಮತ್ತು ಖಾಲಿ ನಿವೇಶನಕ್ಕೆ ಚಕ್ಕುಬಂದಿ:

ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಚಾನಲ್ ರಸ್ತೆ, ಉತ್ತರಕ್ಕೆ : ಪ್ರಕಾಶ್‌ರಾವ್ ಇವರ ಸ್ವತ್ತು, ದಕ್ಷಿಣಕ್ಕೆ : ರಸ್ತೆ.

ಸಂಪರ್ಕಿಸಬೇಕಾದ ವಿಳಾಸ :
**ಶ್ರೀ ಆರ್.ಟಿ. ವಿನಯಕುಮಾರ್**, ವಕೀಲರು, #82/18,
ಪಿ.ಬಿ. ರಸ್ತೆ, ಅರುಣಾ ಟಾಕೀಸ್ ಹತ್ತಿರ, ದಾವಣಗೆರೆ.
ಮೊಬೈಲ್ ನಂ. 98445 97838

ಸಹಿ/-
**ಆರ್.ಟಿ. ವಿನಯಕುಮಾರ್,**
ವಕೀಲರು



# ದಲಿತರ ಮೇಲಿನ ದೌರ್ಜನ್ಯಕ್ಕೆ ಶೀಘ್ರ ಕ್ರಮ

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಂದುಕೊರತೆ ಸಭೆಯಲ್ಲಿ ಎಸ್ಪಿ ಸೂಚನೆ



ದಾವಣಗೆರೆ, ನ.7- ಜಿಲ್ಲೆಯಲ್ಲಿ ದಲಿತರ ಮೇಲಾಗುವ ಯಾವುದೇ ರೀತಿಯ ದೌರ್ಜನ್ಯ ಪ್ರಕರಣಗಳು ವರದಿಯಾದ ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಂಡು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ನಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಂದುಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ದೌರ್ಜನ್ಯ ಪ್ರಕರಣಗಳು ಸಂಭವಿಸಿದ ಕೂಡಲೇ ಅದನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ಆ ಪ್ರಕರಣಗಳ ಚಾರ್ಜ್‌ಶೀಟ್ ಹಾಕಬೇಕು. ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಭಾಗವಹಿಸಿದ ಡಿ.ಎಸ್.ಎಸ್ ಪ್ರತಿನಿಧಿಗಳು ಮಾತನಾಡಿ, ತಾಲ್ಲೂಕು ಮಟ್ಟದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಎಸ್.ಸಿ, ಎಸ್.ಟಿ ಕುಂದುಕೊರತೆ ಸಭೆ ನಡೆಸಬೇಕು. ಸಮಾಜ ಕಲ್ಯಾಣ ಅಧಿಕಾರಿಗಳು ಸಹ ಶೋಷಣೆ, ದೌರ್ಜನ್ಯಕ್ಕೆ ಒಳಗಾದ ಮನೆಗೆ ಭೇಟಿ ನೀಡಿ ತ್ವರಿತ ಗತಿಯಲ್ಲಿ ನ್ಯಾಯ ಒದಗಿಸಬೇಕು ಎಂದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್ ಸಂತೋಷ್, ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ. ನಾಗರಾಜ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಪಿ. ರಮೇಶ್ ಉಪಸ್ಥಿತರಿದ್ದರು.

## ಅರಿವು ಶೈಕ್ಷಣಿಕ ಸಾಲ ಸೌಲಭ್ಯಕ್ಕಾಗಿ ಅರ್ಜಿ

ದಾವಣಗೆರೆ, ನ. 7 - ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಆರ್ಯವೈಶ್ಯ ಸಮುದಾಯದ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್‌ಸೈಟ್ www.kacdc.karnataka.gov.in ಅಥವಾ ಜಿಲ್ಲಾ ವ್ಯವಸ್ಥಾಪಕರು ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ ದಾವಣಗೆರೆ ದೂ.ಸಂ 08192-230934 ಸಂಪರ್ಕಿಸಲು ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಸಾತ್ವಿಕ್ ತಿಳಿಸಿದ್ದಾರೆ.

# ಶಿಕ್ಷಕರ ಉತ್ತಮ ಅಭ್ಯಾಸಗಳಿಂದ ಮಕ್ಕಳ ಸಮಗ್ರ ಬೆಳವಣಿಗೆ



**ಕ್ರೈಸ್ಟ್ ವಿ.ವಿ. ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡಾ. ಗ್ರೇಟಾ ಡಿಸೋಜ**

ದಾವಣಗೆರೆ, ನ. 7 - ಮಕ್ಕಳ ಸಮಗ್ರ ಬೆಳವಣಿಗೆಯಾಗಬೇಕಾದರೆ ಶಿಕ್ಷಕರು ಸಕಾರಾತ್ಮಕ ಚಿಂತನೆ ಹೊಂದಬೇಕು ಹಾಗೂ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡಾ. ಗ್ರೇಟಾ ಡಿಸೋಜ ಹೇಳಿದರು.

ಬೆಂಗಳೂರಿನ ಕ್ರೈಸ್ಟ್ ವಿಶ್ವ ವಿದ್ಯಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಎ.ವಿ. ಕಮಲಮ್ಮ ಮಹಿಳಾ ಕಾಲೇಜು ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತುಗಳ ಸಂಯುಕ್ತಾಶ್ರಯದಲ್ಲಿ ನಗರದ ಎ.ವಿ.ಕೆ. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಮೂರು ದಿನಗಳ 'ನಾಯಕತ್ವ ಮತ್ತು ಮಾರ್ಗದರ್ಶನ ಆಧಾರಿತ ಶಿಕ್ಷಕರ ವೃತ್ತಿ ಬೆಳವಣಿಗೆ ಕಾರ್ಯಕ್ರಮ'ದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಆಜೀವ ಕಲಿಕೆ, ಪರಿಣಾಮಕಾರಿ ಸಂವಹನ, ಸಹಯೋಗ ಹಾಗೂ ಸಮಯ ನಿರ್ವಹಣೆಯ ಅಭ್ಯಾಸಗಳನ್ನು ಶಿಕ್ಷಕರು ರೂಢಿಸಿಕೊಂಡಾಗ ಶಿಕ್ಷಣದ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ ಎಂದರು.

ಗುಣಾತ್ಮಕ ಶಿಕ್ಷಣಕ್ಕಾಗಿ ಶಿಕ್ಷಕರಲ್ಲಿ ಸಕಾರಾತ್ಮಕ ಚಿಂತನೆಗಳು ಇರಬೇಕು. ಶಿಕ್ಷಣದ ರೂಪಾಂತರ ಹಾಗೂ ಬೆಳವಣಿಗೆಗೆ ಶಿಕ್ಷಕರು ಕಾರಣೀಭೂತರಾಗಬೇಕು ಎಂದವರು ಕರೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕಮಲಾ ಸೊಪ್ಪಿನ್, ಮಾನವ ಸಂಪನ್ಮೂಲವೇ ದೇಶದ ನಿಜವಾದ ಶಕ್ತಿಯಾಗಿದೆ. ಅಂತಹ ಶಕ್ತಿ ರೂಪುಗೊಳ್ಳುವುದು ಶಾಲಾ ಕೊಠಡಿಗಳಲ್ಲಿ ಎಂದು ತಿಳಿಸಿದರು.

ದೇಶದ ಬೆಳವಣಿಗೆಗಾಗಿ ಶಿಕ್ಷಣದ ಮಾರ್ಗ ಸುಧಾರಿಸಬೇಕಿದೆ. ದೇಶದ ಸುಸ್ಥಿರ ಅಭಿವೃದ್ಧಿಗೆ ಶಿಕ್ಷಕರು ಕಾರಣೀಭೂತರಾಗಬೇಕಿದೆ ಎಂದವರು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ರವಿಕುಮಾರ್ ಕಗತೂರು, ಜಿಲ್ಲೆಯ 120 ಶಿಕ್ಷಕರು ಈ ಕಾರ್ಯಕ್ರಮದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಶಿಕ್ಷಕರ ಉತ್ತಮ ಕಾರ್ಯನಿರ್ವಹಣೆಗಾಗಿ ನಿಯಮಿತವಾಗಿ ಕಾರ್ಯಾಗಾರಗಳ ಅಗತ್ಯತೆ ಇದೆ ಎಂದು ತಿಳಿಸಿದರು.


ಕಾರ್ಯಕ್ರಮದ ವೇದಿಕೆ ಮೇಲೆ ಎ.ವಿ.ಕೆ. ಕಾಲೇಜಿನ ಐ.ಕ್ಯೂ.ಎ.ಸಿ. ಪ್ರೊ. ಆರ್.ಆರ್. ಶಿವಕುಮಾರ್, ವಿಜ್ಞಾನ ಪರಿಷತ್ ಕಾರ್ಯದರ್ಶಿ ಎಂ. ಗುರುಸಿದ್ದಸ್ವಾಮಿ, ಜಿಲ್ಲಾ ಸಮಿತಿ ಸದಸ್ಯ ಕೆ. ಸಿದ್ದೇಶ್ ಮತ್ತಿತರರು ಉಪಸ್ಥಿತರಿದ್ದರು.


## ಅಂತರ್ ವಿಶ್ವವಿದ್ಯಾಲಯ ಕಬಡ್ಡಿ ಪಂದ್ಯಾವಳಿಗೆ ಆಯ್ಕೆ



ದಾವಣಗೆರೆ, ನ. 7 - ನಗರದ ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಕೆ.ಹೆಚ್. ರಮೇಶ್ ಮತ್ತು ಎನ್. ಜಿತೇಂದ್ರನಾಯ್ಕ ಎಂಬ ವಿದ್ಯಾರ್ಥಿಗಳು ಕಬಡ್ಡಿಯಲ್ಲಿ ದಾವಣಗೆರೆ ವಿಶ್ವವಿದ್ಯಾಲಯದ ವತಿಯಿಂದ ಅಂತರ್ ವಿಶ್ವ ವಿದ್ಯಾಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ನಂತರ ಆಂಧ್ರ ಪ್ರದೇಶದ ಜವಾಹರಲಾಲ್ ನೆಹರು ಟೆಕ್ನಿಕಲ್ ವಿಶ್ವವಿದ್ಯಾಲಯ, ಕಾಕಿನಾಡು ಇಲ್ಲಿ ನಡೆಯುವ ಅಂತರ್ ವಿಶ್ವವಿದ್ಯಾಲಯ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ. ಇವರಿಗೆ ಆಡಳಿತ ಮಂಡಳಿ, ಪ್ರಾಂಶುಪಾಲ ಎಂ.ಡಿ. ಅಣ್ಣಯ್ಯ, ದೈಹಿಕ ಶಿಕ್ಷಣ ನಿರ್ದೇಶಕ ಬಸವರಾಜ್ ವಿ. ದಮ್ಮಳ್ಳಿ, ಐಕ್ಯೂಎಸಿ ಸಂಚಾಲಕ ಡಿ. ಅಂಜಿನಪ್ಪ ಅಭಿನಂದಿಸಿದ್ದಾರೆ.

## ಕಡ್ಲೇಬಾಳು ಶ್ರೀ ನಾಗಸುಬ್ರಹ್ಮಣೇಶ್ವರ ದೇವಾಲಯದಲ್ಲಿ ನ.24 ರಿಂದ 30 ರವರೆಗೆ ಮಹಾಯಾಗ ಕಾರ್ಯಕ್ರಮ





ದಾವಣಗೆರೆ, ನ. 7- ತಾಲ್ಲೂಕಿನ ಕಡ್ಲೇಬಾಳು ಗ್ರಾಮದಲ್ಲಿರುವ ಶ್ರೀ ನಾಗಸುಬ್ರಹ್ಮಣೇಶ್ವರ ಸ್ವಾಮಿ ದೇವಾಲಯದಲ್ಲಿ ದಿನಾಂಕ 24ನೇ ಶುಕ್ರವಾರದಿಂದ ದಿನಾಂಕ 30ರ ಗುರುವಾರದವರೆಗೆ ಶ್ರೀ ನಾಗಸುಬ್ರಹ್ಮಣೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಚತುರ್ವೇದ ಪಾರಾಯಣ ಋಗ್ವೇದ ಸಂಹಿತ ಮಹಾಯಾಗ ಮತ್ತು ಶ್ರೀಮದ್ ಭಾಗವತ ಪಾರಾಯಣ ನಡೆಯಲಿದೆ.

ಶ್ರೀ ಸದ್ಗುರು ಕೃಪಾ ಭವನದ ದೇವರಹಟ್ಟಿಯ ಶ್ರೀ ಕ್ಷೇತ್ರ ಸ್ವರ್ಣವಲ್ಲಿ ಸೇವಾ ಮಹಾ ಸಂಸ್ಥಾನದಿಂದ ಪ್ರಧಾನ ಆಚಾರ್ಯರ ನೇತೃತ್ವದಲ್ಲಿ ಈ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಕಡ್ಲೇಬಾಳು ಶ್ರೀ ನಾಗಸುಬ್ರಹ್ಮಣೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಪಾದ ದೇಶಪಾಂಡೆ ಅವರು ತಿಳಿಸಿದ್ದಾರೆ.

## ಡಿ.ಸಿ ಪಾವಟೆ ಪ್ರಶಸ್ತಿಗೆ ಡಾ. ಸಿದ್ಧಲಿಂಗಮ್ಮ ಆಯ್ಕೆ



ದಾವಣಗೆರೆ, ನ 7 - ಡಾ.ಡಿ.ಸಿ ಪಾವಟೆ ವಿಶ್ವವಿದ್ಯಾಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ ಅತ್ಯುತ್ತಮ ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿಗೆ ಕೊಡ ಮಾಡುವ ಪ್ರಶಸ್ತಿಗೆ ರಾಣೇಬೆನ್ನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್‌ನ ಅಧಿಕಾರಿ ಡಾ. ಬಿ.ಜಿ. ಸಿದ್ಧಲಿಂಗಮ್ಮ ಭಾಜನಾರಾಗಿದ್ದಾರೆ. ಪ್ರಸ್ತುತ ಡಾ. ಬಿ.ಜಿ. ಸಿದ್ಧಲಿಂಗಮ್ಮ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿದ್ದಾರೆ.

# ಒಂಟಿ ಕಾಲಲ್ಲಿ ಮ್ಯಾಕ್ಸ್‌ವೆಲ್ ದ್ವಿಶತಕ

## ಸೆಮಿಫೈನಲ್‌ಗೆ ಪಾದಾರ್ಪಣೆ ಮಾಡಿದ ಆಸ್ಟ್ರೇಲಿಯಾ

ಮುಂಬೈ, ನ. 7 – ಒಂದು ಕಾಲ ಮೇಲೆ ನಿಂತುಕೊಂಡೇ ಬ್ಯಾಟ್ ಬೀಸಿದ ಗ್ಲೆನ್ ಮ್ಯಾಕ್ಸ್‌ವೆಲ್, ಅಚ್ಚರಿಯ ದ್ವಿಶತಕ ಭಾರಿಸುವ ಮೂಲಕ ಏಕಾಂಗಿ ಯಾಗಿ ಆಸ್ಟ್ರೇಲಿಯಾಗೆ ಗೆಲುವು ತಂದುಕೊಂಡಿದ್ದಾರೆ. ಇದರೊಂದಿಗೆ ವಿಶ್ವಕಪ್ ಪಂದ್ಯಾವಳಿಯಲ್ಲಿ ಆಸ್ಟ್ರೇಲಿಯಾ ಮತ್ತೊಮ್ಮೆ ಸೆಮಿಫೈನಲ್ ಹಂತಕ್ಕೆ ಕಾಲಿಟ್ಟಿದೆ.



ಮೊದಲು ಬ್ಯಾಟ್ ಮಾಡಿದ ಆಫ್ಘಾನಿಸ್ತಾನ 291 ರನ್ ಗಳಿಸಿತು. ಗೆಲ್ಲಲು 292 ರನ್‌ಗಳನ್ನು ಬೆನ್ನತ್ತಿದ ಆಸ್ಟ್ರೇಲಿಯಾ, 18.3 ಓವರ್‌ಗಳಲ್ಲಿ ಕೇವಲ 91 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತು. ಆಸ್ಟ್ರೇಲಿಯಾ ಸೋಲು ಬಹುತೇಕ ನಿಶ್ಚಿತವಾಗಿತ್ತು.

ಆದರೆ, ಮ್ಯಾಕ್ಸ್‌ವೆಲ್ ದಿಟ್ಟ ಹೋರಾಟ ಹಾಗೂ ಅದೃಷ್ಟದ ನೆರವಿನಿಂದ ಆಫ್ಘಾನ್ ಬೌಲಿಂಗ್ ಪಡೆಯನ್ನು ಧ್ವಂಸಗೊಳಿಸಿದರು. ಕೇವಲ 128 ಎಸೆತಗಳಲ್ಲಿ 201 ರನ್ ಗಳಿಸಿದರು. ಇದರಲ್ಲಿ 21 ಬೌಂಡರಿ ಹಾಗೂ ಹತ್ತು ಸಿಕ್ಸರ್ ಸೇರಿದ್ದವು. 16 ಅಂಕಗಳೊಂದಿಗೆ ಭಾರತ ಈಗಾಗಲೇ ಸೆಮಿಫೈನಲ್‌ಗೆ ಕಾಲಿಟ್ಟಿದೆ. 12 ಅಂಕಗಳೊಂದಿಗೆ ದಕ್ಷಿಣ ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ಸೆಮಿಫೈನಲ್‌ಗೆ ಪಾದಾರ್ಪಣೆ ಮಾಡಿವೆ.

ಕಾಲ್ಸೆಳೆತದಿಂದ ಬಳಲುತ್ತಿದ್ದ ಮ್ಯಾಕ್ಸ್‌ವೆಲ್, ಕುಂಟುತ್ತಲೇ ಬ್ಯಾಟಿಂಗ್ ಮಾಡಬೇಕಾಯಿತು. ಆದರೆ, ಆಫ್ಘಾನಿಸ್ತಾನದ ಬೌಲರ್‌ಗಳು ಮ್ಯಾಕ್ಸ್‌ವೆಲ್ ಅವರನ್ನು ಕಟ್ಟಿಹಾಕಲು ವಿಫಲರಾದರು. ಆಫ್ಘಾನಿಸ್ತಾನದ ಬೌಲರ್‌ಗಳು ಲಯ ಕಾಯ್ದುಕೊಳ್ಳಲು ಸಾಧ್ಯವಾಗಲಿಲ್ಲ.

ಮತ್ತೊಂದೆಡೆ ನಾಯಕ ಪ್ಯಾಟ್ ಕಮ್ಮಿನ್ಸ್ ಅವರು 68 ಎಸೆತಗಳಲ್ಲಿ 12 ರನ್ ಗಳಿಸಿ ನಾಟೌಟ್ ಆಗಿ ಉಳಿದರು. ಅವರು ಮತ್ತೊಂದು ತುದಿಯಲ್ಲಿ ವಿಕೆಟ್ ಉರುಳದಂತೆ ಕಾಯ್ದುಕೊಂಡರು. ಮ್ಯಾಕ್ಸ್‌ವೆಲ್ ಹಾಗೂ ಕಮ್ಮಿನ್ಸ್ ಎಂಟನೇ ವಿಕೆಟ್‌ಗೆ ದಾಖಲೆಯ 202 ರನ್‌ಗಳ ಜೊತೆಯಾಟ ನಡೆಸಿದರು.

ಇದಕ್ಕೂ ಮುಂಚೆ ಆಫ್ಘಾನಿಸ್ತಾನದ ಇಬ್ರಾಹಿಂ ಜರ್ದಾನ್ ಅವರು 143 ಎಸೆತಗಳಲ್ಲಿ 129 ರನ್ ಗಳಿಸಿದರು. ಆ ಮೂಲಕ ಆಫ್ಘಾನಿಸ್ತಾನದ ಪರವಾಗಿ ವಿಶ್ವಕಪ್‌ನಲ್ಲಿ ಮೊದಲ ಶತಕ ಭಾರಿಸಿದ ಆಟಗಾರರಾದರು.

## ದೇವರಾಜು ಅರಸು ಬಡಾವಣೆಯಲ್ಲಿ ರಾಜ್ಯೋತ್ಸವ

ದಾವಣಗೆರೆ, ನ. 7- ನಗರದ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ನಾಗರಿಕ ಹಿತ ರಕ್ಷಣಾ ಸಮಿತಿ ವತಿಯಿಂದ ನಿನ್ನೆ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಹಿಳೆಯರಿಗೆ ಆಯೋಜನೆ ಮಾಡಲಾಗಿದ್ದ ವಿವಿಧ ಕ್ರೀಡೆಗಳ ವಿಜೇತರಿಗೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರು ಬಹುಮಾನ ವಿತರಿಸಿದರು. ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಶ್ರೀಮತಿ ನಾಗರತ್ನಮ್ಮ ಮಲ್ಲೇಶಪ್ಪ, ಹಿರಿಯ ನ್ಯಾಯವಾದಿ ಶ್ರೀಮತಿ ವಸುಂಧರ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿ ಶ್ರೀಮತಿ ನೀತಾ ಮಂಜುನಾಥ್, ತ್ರಿವೇಣಿ, ತಿಪ್ಪೇಶ್, ಭಾಗ್ಯಮ್ಮ ನಾಗರಾಜಪ್ಪ, ಶ್ರೀಮತಿ ಮಹಾಲಕ್ಷ್ಮಿ ನರಸಿಂಹ ಮೂರ್ತಿ, ಮತ್ತು ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ದೀಪಾ ಜಯಂತ್ ನಿರೂಪಿಸಿದರು. ಕೆ.ಎಂ. ವೀರಯ್ಯ ಸ್ವಾಗತಿಸಿದರು. ಶ್ರೀಮತಿ ನಳಿನ ನಾಗರಾಜ್ ವಂದಿಸಿದರು. ಶ್ರೀಮತಿ ಲತಾ ತೀರ್ಥೇಶ್ ವೇದಿಕೆಯ ಜವಾಬ್ದಾರಿ ವಹಿಸಿಕೊಂಡಿದ್ದರು.



## ರಾಣೇಬೆನ್ನೂರಿನಲ್ಲಿ ನಾಳೆ ವಿದ್ಯುತ್ ಇಲ್ಲ

ರಾಣೇಬೆನ್ನೂರು, ನ. 7- ಚನ್ನೇಶ್ವರ ನಗರ, ಕಂಠಿ ಬೀರೇಶ್ವರ ನಗರ, ಸಿದ್ಧಾರೂಢ ನಗರದ 3 ಮತ್ತು 4 ನೇ ಕ್ರಾಸ್, ಬ್ಯಾಡಗಿ ಲೇ-ಔಟ್ ಮತ್ತು ಹಲಗೇರಿ ರಸ್ತೆಯ ಹತ್ತಿರದ ಬೈಪಾಸ್ ನಂತರದ ಏರಿಯಾಗಳಲ್ಲಿ ನಾಡಿದ್ದು ದಿನಾಂಕ 9ರ ಗುರವಾರ ಬೆಳಿಗ್ಗೆ 11ರಿಂದ ಸಂಜೆ 5ರವರೆಗೆ ವಿದ್ಯುತ್ ಇರುವುದಿಲ್ಲ.

ಬೇಕಾಗಿದ್ದಾರೆ
ಆಫೀಸಿನಲ್ಲಿ ಕೆಲಸಕ್ಕೆ ಅಟೆಂಡರ್ಸ್ (ಹುಡುಗರು) ಬೇಕಾಗಿದ್ದಾರೆ.
ಊಟ, ವಸತಿ, ಸಂಬಳ ಕೊಡುತ್ತೇವೆ.
ಸ್ಥಳ : ಮೈಸೂರು (ವಿದ್ಯಾಸಂಸ್ಥೆಗೆ)
ವಯಸ್ಸು : 35 ವರ್ಷದ ಒಳಗಿನವರು ಮಾತ್ರ
ಕರೆ ಮಾಡಿ :
9964801496

## ಹರಿಹರ ; ಬಡಾವಣೆಗಳಲ್ಲಿನ ಮನೆಗಳಿಗೆ ನೀರು : ಚರಂಡಿ ಸ್ವಚ್ಛಗೊಳಿಸಿದ ನಗರಸಭೆ



ಹರಿಹರ, ನ.7- ನಗರದಲ್ಲಿ ನಿನ್ನೆ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ತೆಗ್ಗಿನಕೇರಿ, ಕುರುಬಗೇರಿ ಬಡಾವಣೆಗಳಲ್ಲಿ ಚರಂಡಿ ಕಟ್ಟಿಕೊಂಡು ಮನೆಗಳಿಗೆ ನೀರು ನುಗ್ಗಿದ ಸ್ಥಳಕ್ಕೆ ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್ ಭೇಟಿ ಕೊಟ್ಟು ನಗರಸಭೆ ಅಧಿಕಾರಿಗಳ ಗಮನಕ್ಕೆ ತರುವ ಮೂಲಕ ಚರಂಡಿ ಸ್ವಚ್ಛತೆಗೆ ಮುಂದಾಗಿ, ನೀರು ಸರಾಗವಾಗಿ ಹರಿಯುವಂತೆ ಮಾಡಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ಕಾಂಗ್ರೆಸ್ ಮುಖಂಡರಾದ ಕಿರಣ್, ರಾಕೇಶ್, ನಗರಸಭೆ ಇಂಜಿನಿಯರ್ ಮಂಜುಳಾ ಇತರರು ಹಾಜರಿದ್ದರು.

## ರಾಘವೇಂದ್ರ ಶಾಲೆಯಲ್ಲಿ ರಾಜ್ಯೋತ್ಸವ 'ಹಳ್ಳಿ ಸೊಗಡು ದೃಶ್ಯಾವಳಿ' ಕಾರ್ಯಕ್ರಮ

ದಾವಣಗೆರೆ, ನ. 7 - ನಗರದ ರಾಘವೇಂದ್ರ ವಿದ್ಯಾನಿಕೇತನ ಶಾಲೆಯಲ್ಲಿ ರಾಷ್ಟ್ರಗೀತೆ, ನಾಡಗೀತೆ ಹಾಗೂ ಆಯ್ದ 5 ಪ್ರಮುಖ ಕನ್ನಡ ಕವಿಗಳ ಗೀತೆಗಳನ್ನು ಹಾಡುವುದರೊಂದಿಗೆ ಅದ್ಧೂರಿಯಾಗಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಕನ್ನಡ ರಾಜ್ಯೋತ್ಸವದ 'ಹಳ್ಳಿ ಸೊಗಡು ದೃಶ್ಯಾವಳಿ' ಯನ್ನು ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಮಂಜುಷಾ ಸೈಮನ್ ಉದ್ಘಾಟಿಸಿದರು. ದೃಶ್ಯಾವಳಿಯಲ್ಲಿ ಸಾಂಪ್ರದಾಯಿಕ ಕಸುಬುಗಳಾದ ಕುಂಬಾರಿಕೆ, ನೇಕಾರಿಕೆ, ಬಳೆಗಾರ, ಪಶುಸಂಗೋಪನೆ, ನಾಟಿ ವೈದ್ಯ ಪದ್ಧತಿ, ಹಳ್ಳಿ ಸಂತೆ, ಗುರುಕುಲ ಪದ್ಧತಿ, ಬೀಸುವ, ಮಜ್ಜಿಗೆ ಕಡೆಯುವುದು, ಧಾನ್ಯರಾಶಿ ಮಾಡುವುದು ಸೇರಿದಂತೆ ಇನ್ನೂ ಅನೇಕ ದೃಶ್ಯಾವಳಿಗಳು ನೋಡುಗರ ಮನರಂಜಿಸಿದವು. ದೃಶ್ಯಾವಳಿಯಲ್ಲಿ ಬಳಸಿದ ವಸ್ತುಗಳು ಎಲ್ಲವೂ ಕಸದಿಂದ ರಸ ಎಂಬಂತೆ ಮರುಬಳಕೆಯ ವಸ್ತುಗಳಾಗಿರುವುದು ದೃಶ್ಯಾವಳಿಯಲ್ಲಿ ವಿಶೇಷವಾಗಿತ್ತು. ಇದರ ಜೊತೆಗೆ ಮಕ್ಕಳಿಂದ ಯಕ್ಷಗಾನ, ವೇಷಭೂಷಣ, ಡೊಳ್ಳು ಕುಣಿತ, ಕೋಲಾಟ ಇನ್ನೂ ಮುಂತಾದ ಜಾನಪದ ಕಲಾಮೇಳಗಳಿಂದ ಮೆರವಣಿಗೆ ಮಾಡುವುದರ ಮೂಲಕ ಸಾರ್ವಜನಿಕರ ಗಮನ ಸೆಳೆದವು.

ಪ್ರಾಂಶುಪಾಲ ಎಂ.ಎಸ್.ಮಂಜುನಾಥ್, ಆಡಳಿತಾಧಿಕಾರಿ ಮೃತ್ಯುಂಜಯ ತಿಗಡಿಮಠ್, ಶೈಕ್ಷಣಿಕ ಮಾರ್ಗದರ್ಶಕರಾದ ಶ್ರೀಮತಿ ಭಾರತಿ ಮುರುಳೀಮಠ್ ಸೇರಿದಂತೆ ಇತರರು ಉಪಸ್ಥಿತರಿದ್ದರು.









# ದಸರಾ ಸಿ.ಎಂ ಕಪ್ ಕ್ರೀಡಾಕೂಟ : ಅಪ್ರತಿಮ ಸಾಧನೆ



ದಾವಣಗೆರೆ, ನ.7- ಮೈಸೂರಿನಲ್ಲಿ ಕಳೆದ ವಾರ ನಡೆದ ದಸರಾ ಸಿ.ಎಂ ಕಪ್ ಕ್ರೀಡಾ ಕೂಟದಲ್ಲಿ ಜಿಲ್ಲೆಯ 45 ಕ್ರೀಡಾಪಟುಗಳು ಭಾಗವಹಿಸಿದ್ದು, 35 ಜನ ಚಿನ್ನದ ಪದಕ ವಿಜೇತರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸಿ ಅವರು ಮಾತನಾಡಿದರು.

ಕ್ರೀಡಾಕೂಟದಲ್ಲಿ ಜಿಲ್ಲೆಯ ಕ್ರೀಡಾಪಟುಗಳು ಭಾಗವಹಿಸಿ ತಮ್ಮ ಏಕಾಗ್ರತೆ, ಪ್ರಯತ್ನ ಹಾಗೂ ಬುದ್ಧಿವಂತಿಕೆಯನ್ನು ತೋರ್ಪಡಿಸುವ ಮೂಲಕ ಜಿಲ್ಲೆಯ ಹೆಮ್ಮೆಗೆ ಪಾತ್ರರಾಗಿದ್ದಾರೆ. ಇದೇ ರೀತಿ ನಿರಂತರವಾಗಿ ಸಾಧನೆ ಮುಂದುವರೆಸಿ ರಾಜ್ಯಮಟ್ಟದಿಂದ ರಾಷ್ಟ್ರ ಮಟ್ಟಕ್ಕೆ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗಿದೆ. ಕುಸ್ತಿಪಟುಗಳು ಪಂಜಾಬ್, ಹರಿಯಾಣ ಹಾಗೂ ಈಶಾನ್ಯ ರಾಜ್ಯಗಳಿಂದ ಹೆಚ್ಚಾಗಿ ಭಾಗವಹಿಸುತ್ತಿದ್ದು, ದಾವಣಗೆರೆ ಜಿಲ್ಲೆಯು ಕೂಡ ಕುಸ್ತಿಯಲ್ಲಿ ಅಪ್ರತಿಮ ಸಾಧನೆ ಮಾಡಿದೆ. ಸಾಧನೆಗಳಿಗೆ ಅತ್ಯುತ್ತಮ ವೇದಿಕೆ ಹಾಗೂ ಮಾರ್ಗದರ್ಶನ ಪ್ರಮುಖವಾಗಿರುತ್ತದೆ. ಸಾಧನೆಯ ಹಂಬಲ ಕ್ರೀಡಾಪಟುಗಳಲ್ಲಿ ಹೆಚ್ಚಾಗಿರಬೇಕು ಎಂದರು.

ಇದೇ ಸಂದರ್ಭದಲ್ಲಿ ದಸರಾ ಕಿಶೋರ್ ಪ್ರಶಸ್ತಿಗೆ ಪಾತ್ರರಾದ ಸಂಜೀವ್ ಹರಪನಹಳ್ಳಿಯವರಿಗೆ ಬೆಳ್ಳಿ ಗದೆ ನೀಡುವ ಮೂಲಕ ಅಭಿನಂದಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಜಯಲಕ್ಷ್ಮಿ ಬಾಯಿ ಕೆ.ಆರ್, ಕುಸ್ತಿ ತರಬೇತುದಾರ ವಿನೋದ್ ಕುಮಾರ್ ಕೆ ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.